WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ - 15 ಸಪ್ಟೆಂಬರ್ 2010

॥ ಧಿಯೋ ಯೋನಃ ಪ್ರಚೋದಯಾತ್ ॥


Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-10 ಸಂಚಿಕೆ-9 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

**ಪುಸ್ತಕ ಪರಿಚಯ :**
**ಪುಸ್ತಕ-'ಯಕ್ಷಲೋಕ ದರ್ಶನ'**
ಲೇಖಕರು : ಎಂ. ದೇವಾನಂದ ಭಟ್
ಪುಟ-2



ಶ್ರೀ ಕೃಷ್ಣಾಯನ
- ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು
ಪುಟ-2




''ಹರಿಕಥೆ ಅಪೇಕ್ಷಿತವೇ? ಅನಪೇಕ್ಷಿತವೇ?-2
- ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.
ಪುಟ-5



**ಡಾ। ಸುಪ್ರಿಯ ನಾಗರಾಜ್ ಅವರಿಗೆ U.S.A ಯ ಎಂ.ಡಿ.ಪದವಿ**
ಪುಟ-7

# ''ಈಶ್ವರನ ಅವತಾರ ಶ್ರೀ ಶಂಕರ ಭಗವತ್ಪಾದರು''

## - ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರು



ಸನಾತನ ಹಿಂದು ಧರ್ಮವು ನಶಿಸಿ ಹೋಗುವ ಸಮಯದಲ್ಲಿ ಈಶ್ವರನ ಅವತಾರವೆಂದೇ ಖ್ಯಾತರಾದ ಶ್ರೀ ಶಂಕರಾಚಾರ್ಯರು ಜನ್ಮವೆತ್ತಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ನಮ್ಮ ಸಮಾಜದ ಏಳಿಗೆಗೆ ಕಾರಣರಾದರು. ಅವರು ಸಕಾಲದಲ್ಲಿ ನಮಗೆ ಮಾರ್ಗದರ್ಶನವನ್ನು ಮಾಡಿ ಸತ್ಪುರುಷರಾಗಿ ಬಾಳುವಂತೆ ಪ್ರೇರೇಪಿಸಿದರು ಮತ್ತು ಗುರು ಪರಂಪರೆಯಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದರು.


''ಈ ಹಿಂದೆ ತಿಳಿಸಿದಂತೆ ಗಣೇಶ ಚತುರ್ಥಿಯ ಹಿಂದಿನ ಭಾನುವಾರವಾದ ಇಂದು ನೀವೆಲ್ಲರೂ ತಪ್ಪದೇ ಶ್ರದ್ಧೆಯಿಂದ ಒಟ್ಟಾಗಿ ಬಂದಿರುವುದು ನಮಗೆ ಹರ್ಷ ತಂದಿದೆ. ಅಧಿಕ ಸಂಖ್ಯೆಯಲ್ಲಿ ಬಂದಿರುವ ನಿಮ್ಮ ಶ್ರದ್ಧೆ ಗುರುಪೀಠದ ಮೇಲೆ ನೀವಿಟ್ಟ ಪ್ರೀತಿಯನ್ನು ತೋರಿಸುತ್ತದೆ. ಹೀಗೆಯೇ ಪ್ರತಿ ವರ್ಷವೂ ಚಾತುರ್ಮಾಸ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿ ಬಂದು ಶ್ರೀ ಗುರುಗಳ ಪ್ರೀತಿಗೆ ಪಾತ್ರರಾಗಿರಿ'' ಎಂದು ಶೃಂಗೇರಿ ಪೀಠಾಧಿಶರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳವರು ಚಾತುರ್ಮಾಸ್ಯ ಕಾಲದಲ್ಲಿ ತಮ್ಮ ದರ್ಶನಾಕಾಂಕ್ಷಿಗಳಾಗಿ ಆಗಮಿಸಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಮಾಜ ಬಾಂಧವರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವಚಿಸಿದರು.

ತಾ.5-9-2010 ಆದಿತ್ಯವಾರ ಜಗದ್ಗುರುಗಳ ಚಾತುರ್ಮಾಸ್ಯ ಭೇಟಿ ಕಾರ್ಯಕ್ರಮದಲ್ಲಿ ಉಡುಪಿ, ಮಂಗಳೂರು, ಕುಂದಾಪುರ, ಕಾರ್ಕಳ, ಬೆಂಗಳೂರು, ಪುತ್ತೂರು, ಬೆಳ್ತಂಗಡಿ, ಸುಳ್ಯ, ಮೈಸೂರು, ಕಾಸರಗೊಡು, ಪಾವಂಜೆ, ಪಡುಬಿದ್ರಿ, ಬಂಟ್ವಾಳ ಹಾಗೂ ದೂರದ ಬೆಂಗಳೂರು, ಮುಂಬೈಯಿಂದ ಸ್ಥಾನಿಕ ಸಮಾಜ ಬಾಂಧವರು ಬಂದಿದ್ದರು. ಪ್ರಾರಂಭದಲ್ಲಿ ಕೋಟೆಕಾರು ಶ್ರೀ ಶಂಕರ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಇವರು ಎಲ್ಲರನ್ನೂ ಸ್ವಾಗತಿಸಿ, ಚಾತುರ್ಮಾಸ ಸಮಯದಲ್ಲಿ ಗುರುಗಳ ಭೇಟಿಯ ವೈಶಿಷ್ಟ್ಯದ ಬಗ್ಗೆ ತಿಳಿಸಿದರು. ಎಲ್ಲರೂ ಒಮ್ಮನಸ್ಸಿನಿಂದ ಪಾದಪೂಜೆ ಸಲ್ಲಿಸಿ, ಹೊರೆ ಕಾಣಿಕೆ ನೀಡಿ ಜಗದ್ಗುರುಗಳ ಆಶೀರ್ವಾದವನ್ನು ಪಡೆದರು. ಕಳೆದ 25 ವರ್ಷಗಳಿಂದಲೂ ಸ್ಥಾನಿಕ ಬ್ರಾಹ್ಮಣ ಸಮಾಜದವರು ಈ ಪೀಠಕ್ಕೆ ನಿರಂತರ ನಿಷ್ಠೆಯನ್ನು ತೋರಿಸುತ್ತಾ ಬಂದಿದ್ದು, ವರ್ಷದಿಂದ ವರ್ಷಕ್ಕೆ ಗುರುಗಳ ಭೇಟಿಗಾಗಿ ಬರುವವರ ಸಂಖ್ಯೆ ಹೆಚ್ಚುತ್ತಲೇ ಇದೆ.


ಅಂದು ಬೆಳಿಗ್ಗೆ 7-30 ಗಂಟೆಗೆ ಉಡುಪಿಯ ಶ್ರೀಶಾರದಾ ಮಂಟಪದಿಂದ ಸುಮಾರು 50 ಜನ ಸಮಾಜ ಬಾಂಧವರು ಎರಡು ಮಿನಿಬಸ್ಸು ಗಳಲ್ಲಿ ಪ್ರಯಾಣ ಬೆಳಿಸಿದರು. ಮಧ್ಯದಾರಿ ಸೋಮೇಶ್ವರದಲ್ಲಿ ಲಘು ಉಪಾಹಾರ ಮುಗಿಸಿ 10-30 ಗಂಟೆಗೆ ಶೃಂಗೇರಿ ತಲುಪಿದರು. ಶೃಂಗೇರಿ ಶ್ರೀಗಳ ಭೇಟಿ ಕಾರ್ಯಕ್ರಮ ಮುಗಿಸಿ ಅಪರಾಹ್ನ 3-30 ಗಂಟೆಗೆ ಶೃಂಗೇರಿಯಿಂದ ಹೊರಟು ಸಂಜೆ 6-30ಕ್ಕೆ ಉಡುಪಿಯನ್ನು ತಲುಪಿದರು. ಚಾತುರ್ಮಾಸ್ಯ ಕಾಲದಲ್ಲಿ ಗುರುಗಳ ಭೇಟಿಯ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಸಮಾಜ ಬಾಂಧವರಿಗೂ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯು ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**







॥ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ವಿಕೃತಿ ನಾಮ ಸಂವತ್ಸರದ ತುಲಾ ಮಾಸ ದಿನ ೩೦ ಸಲುವ ಅಶ್ವಯುಜ ಶುದ ೧೦ ಯು, ತಾ.17-10-2010ನೇ ಆದಿತ್ಯವಾರ

**ವಿಜಯದಶಮಿ ದಿನದಂದು**

# ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

**ಸಿ. ಎಸ್. ರಾವ್**
ಅಧ್ಯಕ್ಷರು

**ಬಿ. ಕೃಷ್ಣಮೂರ್ತಿ ರಾವ್**
ಕಾರ್ಯದರ್ಶಿ

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

**ವಿ.ಸೂ. :** ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎನ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಸಮಾಜ ನನಗೇನು ಕೊಟ್ಟಿದೆ? ದೇಶ ನನಗೇನು ಕೊಟ್ಟಿದೆ? ಯಾವುದೇ ಸಂಘ ಸಂಸ್ಥೆ ನನಗೇನು ಕೊಟ್ಟಿದೆ? ಎನ್ನುವುದಕ್ಕಿಂತ ಸಮಾಜಕ್ಕಾಗಿ, ದೇಶಕ್ಕಾಗಿ, ಸಂಘ ಸಂಸ್ಥೆಗಳಿಗಾಗಿ ನಾನೇನು ಮಾಡಿದ್ದೇನೆ ಎನ್ನುವುದೇ ಸರಿಯಾದ ಮಾತು.

ಎಲ್ಲ ಮಾನವನೂ ಜೀವನದಲ್ಲಿ ಏನಾದರೂ ಮಹತ್ವವಾದ ಸಾಧನೆ ಮಾಡಬೇಕೆಂದು ಬಯಸುತ್ತಾನೆ. ಆ ಸಾಧನೆಯ ಮೂಲಕ ತಾನು ಸಮಾಜದಲ್ಲಿ, ಸಂಘ ಸಂಸ್ಥೆಗಳಲ್ಲಿ, ದೇಶದಲ್ಲಿ ಗುರತಿಸಲ್ಪಡಬೇಕೆಂದು ಇಚ್ಛಿಸುತ್ತಾನೆ. ಅದಕ್ಕಾಗಿ ತನ್ನದಾದ ಏನೊಂದೂ ಕೊಡುಗೆಯನ್ನು ನೀಡದೆ ಅವನು ಗುರುತಿಸಲ್ಪಡಲು ಸಾಧ್ಯವಿಲ್ಲ.

ಸಮಾಜದಲ್ಲಿ ಎಲ್ಲರೊಂದಿಗೆ ಬೆರೆತು, ಕೆಲವೊಂದು ಸಣ್ಣ ಪುಟ್ಟ ಉಪಕಾರಗಳನ್ನು ಮಾಡುತ್ತಾ, ಸಮಾಜದಲ್ಲಿ ತನ್ನನ್ನು ಗುರುತಿಸಿಕೊಳ್ಳಬೇಕು. ಅಲ್ಲದೆ ಸಂಘ ಸಂಸ್ಥೆಗಳಲ್ಲಿ ಇದ್ದವರು ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ಅದರ ಕೆಲಸಗಳನ್ನು ಹೆಚ್ಚಿನ ಮುತುವರ್ಜಿಯಿಂದ ಮಾಡಿ, ಸಂಘ ಸಂಸ್ಥೆಯಲ್ಲಿಯೂ ತನ್ನನ್ನು ತಾನು ಗುರುತಿಸಿಕೊಳ್ಳಬೇಕು. ಅಂತವರ ಸೇವಾ ಮನೋಭಾವ, ಸೇವಾ ನಿಪುಣತೆ, ತಾವು ನೀಡಿದ ಕೊಡುಗೆ ಮೊದಲಾದುವುಗಳನ್ನು ಉಳಿದವರು ಖಂಡಿತಾ ಗುರತಿಸುತ್ತಾರೆ. ಅಲ್ಲದೆ ಅವನ ಕಾಯ ಅಳಿದರೂ ಕೀರ್ತಿ ಉಳಿಯುತ್ತದೆ.

ನಾವು ನಮ್ಮಷ್ಟಕ್ಕೆ ಇದ್ದು ಬಿಟ್ಟರೆ ದೇಶವೋ, ಸಂಘ ಸಂಸ್ಥೆಯೋ ನಮಗೇನನ್ನೂ ನೀಡದು. ನಾವು ನಮ್ಮ ಸ್ವಪ್ರಯತ್ನ, ಸ್ವಪ್ರತಿಭೆಗಳನ್ನು ಅವಕಾಶ ಸಿಕ್ಕಿದಾಗ ಬಳಸಿಕೊಂಡು, ಸಿಗದಿದ್ದಾಗ ಅವಕಾಶ ಸಿಗುವಂತೆ ಮಾಡಿಕೊಂಡು, ಮುನ್ನಡೆದರೆ ಮಾತ್ರ ನಮ್ಮನ್ನು ಇತರರು ಗುರುತಿಸಲು ಸಾಧ್ಯ. ಅದಕ್ಕಾಗಿ ನಾವು ಪ್ರಯತ್ನಿಸಬೇಕು ಎಂದು ತಿಳಿಯೋಣವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಇತ್ತ ಕಂಸನ ಆಜ್ಞೆಯಂತೆ ವೃಂದಾವನಕ್ಕೆ ಹೊರಟ ಕೇಶಿದಾನವನು ಒಂದು ಭಯಂಕರ ಕುದುರೆಯ ರೂಪವನ್ನು ತಾಳಿದನು. ಹೇಷಾರವ ಮಾಡುತ್ತಾ, ಖುರಗಳಿಂದ ಭೂಮಿಯನ್ನು ಕೆದರುತ್ತಾ, ತನ್ನ ಹೆಗಲ ಕೂದಲುಗಳಿಂದ ಮೋಡಗಳನ್ನು ಚದುರಿಸುತ್ತಾ ವ್ರಜವನ್ನು ಪ್ರವೇಶಿಸಿದನು. ಅಲ್ಲಿ ಕೃಷ್ಣನನ್ನು ಹುಡುಕುತ್ತಿದ್ದ ಕೇಶಿಯನ್ನು ಕೃಷ್ಣನು ಸಿಂಹದಂತೆ ಗರ್ಜಿಸಿ ಯುದ್ಧಕ್ಕೆ ಕರೆದನು. ಆಗ ರೋಷಭೀಷಣನಾದ ಕೇಶಿಯು ಹಿಂಗಾಲುಗಳಿಂದ ಗೋವಿಂದನಿಗೆ ಒದೆದನು. ಆದರೆ ದೇವರೊಡೆಯನು ಆ ಹಿಂಗಾಲುಗಳನ್ನೇ ಹಿಡಿದು ಗರಗರನೆ ತಿರುಗಿಸಿ ನೂರು ಬಿಲ್ಲುಗಳಷ್ಟು ದೂರಕ್ಕೆಸೆದನು. ಕ್ಷಣ ಮಾತ್ರದಲ್ಲಿ ಚೇತರಿಸಿಕೊಂಡ ಕೇಶಿಯು ವಾಸುದೇವನನ್ನು ಕಚ್ಚಲು ನುಗ್ಗಿ ಬಂದನು. ಆಗ ಕೃಷ್ಣನು ತನ್ನ ತೋಳನ್ನು ಅವನ ತೆರೆದ ಬಾಯೊಳಗೆ ತೂರಿಸಿದನು. ಭಗವಂತನ ತೋಳು ಕಬ್ಬಿಣದಂತೆ ಕಠಿನವಾಗಲು ರಾಕ್ಷಸನ ಹಲ್ಲುಗಳು ಮುರಿದು ಬಿದ್ದವು. ಕೃಷ್ಣನ ತೋಳು ದಪ್ಪವಾಗುತ್ತಾ ಹೋಯಿತು. ಇದರಿಂದ ದಾನವನ ಗಂಟಲು ಕಟ್ಟಿತು. ಉಸಿರುಗಟ್ಟಿದ ಕುದುರೆಯು ಲದ್ದಿ ಹಾಕಿ ಸತ್ತೇ ಹೋಯಿತು.

ಅಷ್ಟರಲ್ಲಿ ಕಂಸನಲ್ಲಿಂದ ನಾರದರು ಕೃಷ್ಣನಲ್ಲಿಗೆ ಬಂದು ಅವನ ಭವಿಷ್ಯದ ಲೀಲೆಗಳನ್ನು ವರ್ಣಿಸಿ, ಅವನಿಗೆ ನಮಸ್ಕರಿಸಿ ಹೋದರು.

ಕೇಶಿದೈತ್ಯನ ವಧೆಯಾದ ಬಳಿಕ ರಾಮ, ಕೃಷ್ಣರು ಗೊಲ್ಲರೊಡನೆ ದನಕರುಗಳನ್ನು ಮೇಯಿಸುವ ಕಾಯಕವನ್ನು ಮುಂದುವರಿಸಿದರು. ಒಂದು ದಿನ ಅವರೆಲ್ಲ ಕಳ್ಳ, ಕುರಿ, ರಕ್ಷಕ ಆಟವನ್ನು ಆಡುತ್ತಿದ್ದರು. ಕೆಲವರು ಕಳ್ಳರು, ಕೆಲವರು ಕುರಿಗಳು, ಮತ್ತೆ ಕೆಲವರು ರಕ್ಷಕರಾಗಿ ಆಡುವುದೇ ಆ ಆಟ. ಆಗ ಮಯಾಸುರನ ಮಗನಾದ ವ್ಯೋಮಾಸುರನು ಒಬ್ಬ ಗೊಲ್ಲನ ವೇಷದಲ್ಲಿ ಅಲ್ಲಿಗೆ ಬಂದು ಆಟದಲ್ಲಿ ಸೇರಿಕೊಂಡನು. ಅವನು ಕಳ್ಳನಾಗಿ ಕುರಿಗಳಾದ ಗೊಲ್ಲರನ್ನು ಕದ್ದುಕೊಂಡು ಹೋಗಿ ಅವರನ್ನೊಂದು ಗುಹೆಯೊಳಗೆ ಬಚ್ಚಿಟ್ಟು ಗುಹೆಯ ಬಾಗಿಲಿಗೆ ದೊಡ್ಡ ಬಂಡೆಯನ್ನು ಮುಚ್ಚಿ ಬರುತ್ತಿದ್ದನು. ಆ ರೀತಿ ಕೊನೆಗೆ ನಾಲ್ಕೈದು ಕುರಿಗಳು ಮಾತ್ರ ಉಳಿದವು. ಆಗ ಕೃಷ್ಣನಿಗೆ ರಕ್ಕಸನ ಚೇಷ್ಟೆ ಅರ್ಥವಾಯಿತು. ಅವನು ಕೂಡಲೇ ಕುರಿಯನ್ನು (ಬಾಲಕನನ್ನು) ಹೊತ್ತುಕೊಂಡು ಓಡುತ್ತಿದ್ದ ಅವನನ್ನು ಗಟ್ಟಿಯಾಗಿ ಹಿಡಿದುಕೊಂಡನು. ದೈತ್ಯನು ತನ್ನ ಪರ್ವತಾಕಾರದ ನಿಜರೂಪದಲ್ಲಿ ಕಾಣಿಸಿಕೊಂಡು ಕೃಷ್ಣನಿಂದ ಬಿಡಿಸಿಕೊಳ್ಳಲು ಹೆಣಗಾಡಿದನು. ಆದರೆ ಬಿಡಿಸಿಕೊಳ್ಳಲಾಗಲಿಲ್ಲ. ಅಷ್ಟರಲ್ಲಿ ಕೃಷ್ಣನು ರಕ್ಕಸನನ್ನು ಸಿಂಹವು ಮೃಗವನ್ನು ಕೊಲ್ಲುವಂತೆ ಕೊಂದುಬಿಟ್ಟನು.

### ೭

ಕಂಸನ ಆಜ್ಞೆಯಾದ ಮರುದಿನ ಬೆಳಿಗ್ಗೆ ಅಕ್ರೂರನು ರಥದಲ್ಲಿ ಕುಳಿತು ವ್ರಜ ಭೂಮಿಗೆ ಪಯಣಿಸಿದನು. ಅವನು ಕೃಷ್ಣನನ್ನು ನೋಡಲು, ನೋಡಿ ಧನ್ಯನಾಗಲು ಉತ್ಸುಕನಾಗಿದ್ದನು. ತಾನು ಕಂಸನ ದೂತನಾಗಿ ಹೋಗುವುದರಿಂದ ತನ್ನನ್ನೂ ಶತ್ರುವೆಂದೇ ಭಗವಂತನಾದ ಶ್ರೀಕೃಷ್ಣನು ಭಾವಿಸಬಹುದೇ ಎಂಬ ಶಂಕೆಯುಂಟಾಯಿತು. ಆದರೆ ಸರ್ವಾಂತರ್ಯಾಮಿಯಾದ ಆಸ್ವಾಮಿಯು ಅವನು ಭಕ್ತನಾದ ತನ್ನನ್ನು ತಪ್ಪು ತಿಳಿಯಲಾರನೆಂಬ ಧೈರ್ಯವೂ ಬಂತು. ಮನದಲ್ಲಿ ಪರಮಾತ್ಮನ ಲೀಲೆಗಳನ್ನು ಮೆಲುಕು ಹಾಕಿಕೊಳ್ಳುತ್ತಾ ನಂದಗೋಪನ ಮನೆಗೆ ತಲುಪಿದನು. ಆಗ ಸಾಯಂಕಾಲವಾಗಿತ್ತು. ರಾಮ, ಕೃಷ್ಣರು ಹಾಲುಕರೆಯುವುದನ್ನು ಕಂಡನು. ರಾಮನು ನೀಲಾಂಬರದಲ್ಲೂ, ಕೃಷ್ಣನು ಪೀತಾಂಬರದಲ್ಲೂ ಇದ್ದರು. ಒಬ್ಬನು ಬೆಳ್ಳಗೂ, ಇನ್ನೊಬ್ಬನು ಶ್ಯಾಮಲನೂ ಆಗಿದ್ದರು. ಅವರಿಬ್ಬರನ್ನು ಕಾಣುತ್ತಲೇ ಅಕ್ರೂರನು ಸ್ನೇಹವಿಹ್ವಲನಾಗಿ ರಥದಿಂದ ಕೆಳಕ್ಕೆ ನೆಗೆದು ಅವರ ಮುಂದೆ ಧಾವಿಸಿ ಸಾಷ್ಟಾಂಗ ನಮಸ್ಕಾರ ಮಾಡಿದನು. ಭಾವೋದ್ವೇಗದಿಂದ ಅವನಿಗೆ ತನ್ನ ಹೆಸರನ್ನುಚ್ಚರಿಸಲೂ ಆಗಲಿಲ್ಲ. ಅವನ ಕಣ್ಣುಗಳಿಂದ ಆನಂದಬಾಷ್ಪಗಳು ಉರುಳುತ್ತಿದ್ದವು. ಮೈಯೆಲ್ಲ ರೋಮಾಂಚನಗೊಂಡಿತ್ತು. ಭಕ್ತವತ್ಸಲನಾದ ಶ್ರೀಕೃಷ್ಣನು ಹಾಲುಕರೆಯುವ ಕೆಲಸವನ್ನು ಅಲ್ಲೇ ಬಿಟ್ಟು ಓಡಿಬಂದು ಅಕ್ರೂರನನ್ನು ಎಬ್ಬಿಸಿ ಅಪ್ಪಿಕೊಂಡನು. ಬಲರಾಮನೂ ಅವನನ್ನು ಆಲಿಂಗಿಸಿದನು.

ಅನಂತರ ಅವರು ಅಕ್ರೂರನನ್ನು ಮನೆಯೊಳಗೆ ಕರೆದುಕೊಂಡು ಹೋದರು. ಯೋಗ್ಯ ಆಸನದಲ್ಲಿ ಕುಳ್ಳಿರಿಸಿ ಪಾದ್ಯಾದ್ಯುಪಚಾರಗಳನ್ನಿತ್ತರು. ಆದಾದ ಬಳಿಕ ಅವನಿಗೆ ಪರಮಾದರದಿಂದ ಶುಚಿರುಚಿಯಾದ ಉಪಾಹಾರವನ್ನಿತ್ತರು. ಉಪಾಹಾರಾನಂತರ ಸುಗಂಧಮಯ ತಾಂಬೂಲವನ್ನಿತ್ತರು. ಅಷ್ಟರಲ್ಲಿ ನಂದಯಶೋದೆಯರೂ ಬಂದು ಅಕ್ರೂರನ ಯೋಗಕ್ಷೇಮವನ್ನು ವಿಚಾರಿಸಿದರು. ನಂದನ ಮೃದುಮಧುರ ಮಾತುಗಳಿಂದ ಅಕ್ರೂರನ ಮಾರ್ಗಾಯಾಸವೆಲ್ಲ ಪರಿಹಾರವಾಯಿತು.

ರಾತ್ರಿಯ ಊಟವಾದ ಮೇಲೆ ಅಕ್ರೂರನು ಒಬ್ಬನೇ ವಿಶ್ರಾಂತಿ ಪಡೆಯುತ್ತಿದ್ದನು. ಆಗ ಶ್ರೀಕೃಷ್ಣನು ಅವನ ಬಳಿಗೆ ಬಂದು ತನ್ನ ತಂದೆ, ತಾಯಿ ಮತ್ತು ಬಂಧುಗಳ ಯೋಗಕ್ಷೇಮವನ್ನು ವಿಚಾರಿಸಿದನು. ದುಷ್ಟಕಂಸನು ಅವರಿಗೆ ಕಿರುಕುಳ ಕೊಡುತ್ತಿರುವನೇ ಎಂದು ಪ್ರಶ್ನಿಸಿದನು. ಅಕ್ರೂರನು ಅವರ ಶೋಚನೀಯ ಸ್ಥಿತಿಯನ್ನು, ಕಂಸನಿಂದ ಅವರಿಗೊದಗಿದ ಸಂಕಷ್ಟಗಳನ್ನು ವಿವರಿಸಿ ಹೇಳಿದನು. ಕೊನೆಗೆ ಕಂಸನ ಸಂದೇಶವನ್ನು ಅರುಹಿದನು. ರಾಮ, ಕೃಷ್ಣರು ಮಥುರೆಯಲ್ಲಿ ನಡೆಯಲಿರುವ ಧನುರ್ಯಾಗದ ಸುದ್ದಿಯನ್ನು, ಕಂಸನ ಸಂದೇಶವನ್ನೂ ನಂದಗೋಪನಿಗೆ ತಿಳಿಸಿದರು. ನಂದಗೋಪನು ಗೋಪಾಲರನ್ನು ಕರೆದು ಹಾಲು, ಮೊಸಲು, ಬೆಣ್ಣೆ, ತುಪ್ಪ ಮತ್ತಿತರ ಕಾಣಿಕೆಗಳನ್ನು ಸಿದ್ಧಪಡಿಸಲು ತಿಳಿಸಿ ಮರುದಿನ ಬೆಳಗ್ಗೆ ಮಥುರೆಗೆ ಹೋಗುವ ವಿಚಾರವನ್ನು ಹೇಳಿದನು.

ರಾಮ, ಕೃಷ್ಣರು ಮಥುರೆಗೆ ಹೋಗುವ ಸುದ್ದಿ ವ್ರಜದಲ್ಲಿ ಎಲ್ಲೆಡೆ ಹರಡಿತು. ಗೋಪಿಯರೆಲ್ಲ ಶೋಕೋದ್ವಿಗ್ನರಾದರು. ಕೆಲವರು ವಿರಹ ವ್ಯಥೆಯಿಂದ ಮೂರ್ಛಿತರಾದರು. ಅವರೆಲ್ಲರೂ ಕಂಸನನ್ನೂ, ಅಕ್ರೂರನನ್ನೂ ನಿಂದಿಸಿದರು.

ಮರುದಿನ ನಂದನೂ,. ಅವನ ಅನುಚರರೂ ಎತ್ತಿನಗಾಡಿಗಳಲ್ಲಿ ಪ್ರಯಾಣ ಮಾಡಿದರು. ರಾಮ,ಕೃಷ್ಣರು ಅಕ್ರೂರನ ರಥದಲ್ಲಿದ್ದರು. ಅನೇಕ ಗಾಡಿಗಳಲ್ಲಿ ಹಾಲು, ಮೊಸರು, ಬೆಣ್ಣೆ, ತುಪ್ಪ ಮತ್ತಿತರ ಕಾಣಿಕೆಯ ವಸ್ತುಗಳನ್ನು ತುಂಬಿದ್ದರು. ಇಡಿ ವ್ರಜವೇ ಗಾಡಿಗಳ ಹಿಂದಿನಿಂದ ಅಷ್ಟು ದೂರ ಹಿಂಬಾಲಿಸಿತು. ಗೋಪಿಯರೆಲ್ಲ 'ಕೃಷ್ಣ, ಕೃಷ್ಣ' ಎಂದು ಕೂಗುತ್ತಾ, ಕಣ್ಣೀರ್ಗರೆಯುತ್ತಾ ಗಾಡಿಗಳ ಹಿಂದೆ ಹಿಂದೆ ಓಡಿದರು. ಶ್ರೀಕೃಷ್ಣನು ಕೆಲವು ಗೊಲ್ಲರ ಮೂಲಕ ತಾನು ಹಿಂದಕ್ಕೆ ಬರುವುದಾಗಿ ಗೋಪಿಯರಿಗೆ ಆಶ್ವಾಸನೆ ಕೊಟ್ಟನು. ಗಾಡಿಗಳು ಕಣ್ಣಿಂದ ಮರೆಯಾದ ಮೇಲೆ ಮಾರ್ಗದ ಧೂಳು ಕಡಿಮೆಯಾಗುವವರೆಗೂ ವ್ರಜ ವಾಸಿಗಳು ನಿಂತಲ್ಲೇ ನಿಂತಿದ್ದರು. (ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ತೈಲಾತ್ ರಕ್ಷೇತ್ ಜಲಾತ್ ರಕ್ಷೇತ್**
**ರಕ್ಷೇತ್ ಶಿಥಿಲ ಬಂಧನಾತ್ ।**
**ಪರಹಸ್ತ ದತಾತ್ ರಕ್ಷೇತ್**
**ಏವಂ ವದತಿ ಪುಸ್ತಕಂ ॥**

ಅಂದರೆ ಎಣ್ಣೆಯಿಂದ ರಕ್ಷಿಸಬೇಕು. ನೀರಿನಿಂದ ಕಾಪಾಡಬೇಕು. ಸಡಿಲವಾಗುವ ರಕ್ಷಾಪುಟಗಳಿಂದ ಕಾಪಾಡಬೇಕು. ಮತ್ತೊಬ್ಬರ ಕೈಗೆ ಎರವಲಾಗದಂತೆ ಕಾಪಾಡಬೇಕು ಎಂದು ಪುಸ್ತಕ ಹೇಳುತ್ತದೆ.

**ಪುಸ್ತಕ ಪರಿಚಯ :**

**"ಯಕ್ಷಲೋಕ ದರ್ಶನ"**

*ಲೇಖಕರು :* **ಎಂ. ದೇವಾನಂದ ಭಟ್**

*ಪ್ರಕಾಶಕರು :*

**ಶ್ರೀ ಯಕ್ಷದೇವ ಮಿತ್ರ ಕಲಾ ಮಂಡಳಿ**
**ಬೆಳುವಾಯಿ, ಮಂಗಳೂರು**

*ಬೆಲೆ :* **ರೂ.65/-**

'ಯಕ್ಷಲೋಕ ದರ್ಶನ' ಕೃತಿಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ರಾಜರ್ಷಿ ಡಾ। ಡಿ. ವಿರೇಂದ್ರ ಹೆಗ್ಗಡೆಯವರು ಸಂದೇಶದಲ್ಲಿ ತಿಳಿಸಿದಂತೆ "ಮಂಗಳೂರು ತಾಲೂಕಿನ ಬೆಳುವಾಯಿ ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿಯ ಸಂಘಟನಾ ಅಧ್ಯಕ್ಷರಾದ ಶ್ರೀ ಎಂ. ದೇವಾನಂದ ಭಟ್‌ರವರು ಯಕ್ಷಗಾನ ಕಲೆಯ ಕುರಿತು ಯಕ್ಷಲೋಕ ದರ್ಶನ ಎಂಬ ವಿಮರ್ಶಾ ಲೇಖನಗಳನ್ನೊಳಗೊಂಡ ಪುಸ್ತಕವನ್ನು ಬರೆದಿರುವುದು ಸ್ತುತ್ಯರ್ಹವಾಗಿದೆ...."

ಡಾ। ಎಂ. ಪ್ರಭಾಕರ ಜೋಷಿಯವರು ಶುಭಾಶಂಸನೆಯಲ್ಲಿ ನುಡಿದಂತೆ "ಈ ಕಿರು ಹೊತ್ತಗೆಯಲ್ಲಿ ಶ್ರೀ ಭಟ್ಟರು ಕಲೆಯ ಕುರಿತಾದ ತಮ್ಮ ಅನುಭವ ಅನಿಸಿಕೆಗಳನ್ನು ದಾಖಲಿಸಿದ್ದಾರೆ. ಇಂತಹ ಬರಹಗಳು ಕಲೆಯ ಹೆಚ್ಚಿನ ಅಭ್ಯಾಸಕ್ಕೆ, ಆಸಕ್ತಿಗೆ, ಅಭಿಮಾನಕ್ಕೆ ಪ್ರೇರಕ ಪೂರಕಗಳು..."

ಹುಟ್ಟು ಕಲಾವಿದ, ಉತ್ತಮ ಸಂಘಟಕ, ಸಹೃದಯ ಕಲಾಸ್ನೇಹಿತ, ಆತ್ಮೀಯ ಅತಿಥೇಯರಾದ ಎಂ. ದೇವಾನಂದ ಭಟ್ಟರು ತನ್ನ ಚಿಂತನಶೀಲ ಚಿಕಿತ್ಸಕ ದೃಷ್ಟಿಯಲ್ಲಿ ಕಲಾಮಾಧ್ಯಮದೊಳಗೆ ತಾನಿದ್ದು ಹೊರಗಿನಿಂದ ಕಲೋಚಿತ, ಕಾಲೋಚಿತ, ಕಲಾನ್ಯಾಯೋಚಿತವಾಗಿ ವಿಮರ್ಶಿಸಿ ವಿಶ್ಲೇಷಿಸಿದ್ದಾರೆ. ಸನ್ಮಿತ್ರರ ಪ್ರಯತ್ನ ಸದಾ ಶ್ಲಾಘನೀಯವಾದುದು ಎಂದು ಈ ಕೃತಿಯಲ್ಲಿ ಉಜಿರೆ ಅಶೋಕ್ ಭಟ್ ತಿಳಿಸುತ್ತಾರೆ.

'ಕಲೆ'ಯನ್ನು ಕಾಣುವ ಕಣ್ಣೊಂದನ್ನು ಮಾನವನು ಗಳಿಸಿಕೊಂಡಾಗ ಅರಳುವ ಕಲ್ಲನ್ನು, ಕೊನರುವ ಕೊರಡನ್ನೂ ಕಾಣುವ ಸೌಭಾಗ್ಯವನ್ನು ಕಲಾ ಪ್ರಪಂಚದಲ್ಲಿ ದರ್ಶಿಸಬಹುದು ಎಂದು ವೇದ್ಯವಾಯಿತು. ಹೀಗೆ ರಚಿತವಾದ ಈ ಕೃತಿ ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿಯು 12ನೇ ವರ್ಷದ ಸಾಂಸ್ಕೃತಿಕ ಸಂಭ್ರಮ 'ಯಕ್ಷಲೋಕ ದರ್ಶನ' ನಡೆಸುವ ಸುಸಂದರ್ಭದಲ್ಲಿ ಅದೇ ಹೆಸರಿನಿಂದ ಲೋಕಾರ್ಪಣೆಗೊಳ್ಳುತ್ತಿರುವುದು ಹರ್ಷದಾಯಕವಿಚಾರ ಎಂದು ಕೃತಿಕರ್ತರಾದ ಎಂ. ದೇವಾನಂದ ಭಟ್ ಈ ಕೃತಿಯಲ್ಲಿ ತಿಳಿಸಿರುವುದು ಮನನೀಯವಾಗಿದೆ.

ಯಕ್ಷಲೋಕ ದರ್ಶನ ಎಂಬ ಈ ಕೃತಿಯಲ್ಲಿ ಯಕ್ಷಗಾನ ಬೆಳೆದುಬಂದ ದಾರಿ, ರಂಗಕಲಾವಿನ್ಯಾಸ, ಧಾರ್ಮಿಕ ದಾರ್ಶನಿಕ ಯಕ್ಷಗಾನ, ಈ ಕಲೆಯ ಸೊಂಪು ಕಂಪು ಹೀಗೆ ಹಲವಾರು ಲೇಖನಗಳಲ್ಲಿ ಎಂ. ದೇವಾನಂದ ಭಟ್ ಇವರು ಯಕ್ಷಲೋಕವನ್ನು ದರ್ಶನ ಸಾಧ್ಯವಾಗಿಸಿದ್ದಾರೆ. ಈ ಕೃತಿಯ ಆಕರ್ಷಕ ಮುಖಪುಟ, ಹಲವು ಉತ್ತಮ ಚಿತ್ರಗಳು ಓದುಗರಿಗೆ ಮುದ ನೀಡುತ್ತವೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಲೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್.



# ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ-576 102

**ಶಾರದಾ ಶಾರದಾಂಭೋಜವದನಾ ವದನಾಂಬುಜೇ ।**
**ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಧಿಂ ಕ್ರಿಯಾತ್ ॥**

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.08-10-2010ರಿಂದ 17-10-2010ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ
ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು.
ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ

**- ಆಡಳಿತ ಮಂಡಳಿ**

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102**

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

**ತಾ.17-10-2010ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 9.00 ರಿಂದ ಸಂಜೆ 2.00 ಗಂಟೆಯ ವರೆಗೆ ನಮ್ಮ ಸಮಾಜ ಬಾಂಧವರಿಗಾಗಿ**

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| | 1 | 2 | 3 | |
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | 8ನೇ ತರಗತಿಯಿಂದ ಪದವಿಪೂರ್ವ ತರಗತಿ | (4 ನಿಮಿಷ) |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಯಾವುದೇ ಚಿತ್ರ) | 5-7ನೇ ತರಗತಿಯವರೆಗೆ (ಯಾವುದೇ ದೃಶ್ಯ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯ ವಿದ್ಯಾರ್ಥಿಗಳು ಜಗದ್ಗುರು ಶ್ರೀ ಶಂಕರಾಚಾರ್ಯರ ಚಿತ್ರ | (90 ನಿಮಿಷ) |
| **ರಂಗವಲ್ಲಿ** | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ) | 8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ | (90 ನಿಮಿಷ) |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ (ಕಂಠಪಾಠ ಸ್ಪರ್ಧೆಯ ಶ್ಲೋಕಗಳನ್ನು 3ನೇ ಪುಟದಲ್ಲಿ ನೀಡಲಾಗಿದೆ. ಈ ಶ್ಲೋಕಗಳಲ್ಲಿ ನಿರ್ಣಾಯಕರು ಕೇಳುವ ಶ್ಲೋಕಗಳನ್ನು ಹೇಳಬೇಕು) | | 8ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ | |
| **ಛದ್ಮವೇಷ** (ಏಕವ್ಯಕ್ತಿ) ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8-10ನೇ ತರಗತಿಯವರೆಗೆ | (4 ನಿಮಿಷ) |
| **ಹೂ ಜೋಡಿಸುವುದು** (ಮುಕ್ತ ಅವಕಾಶ) | (ಬೆಳಿಗ್ಗೆ 10.30 ರಿಂದ ಪ್ರಾರಂಭ) ಹೂಗಳನ್ನು ಸ್ಪರ್ಧಿಗಳೇ ತರಬೇಕು. | | | (30 ನಿಮಿಷ) |
| **ಚೂರ್ಣಿಕೆ ಹೇಳುವುದು** | ಎಲ್ಲಾ ವಯಸ್ಸಿನವರಿಗೂ ಮುಕ್ತ ಅವಕಾಶ. | | ಮಧ್ಯಾಹ್ನ ಊಟ ನಡೆಯುತ್ತಿರುವಾಗ ಚೂರ್ಣಿಕೆ ಹೇಳುವುದು | |

ವಿಶೇಷ ಸೂಚನೆಗಳು : 1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. 2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು. 3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು. 4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು. 5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.
**6) ಶ್ರೀಶಾರದಾ ದೇವಿಗೆ ಹರಕೆಯ ರೂಪದಲ್ಲಿ ಬಂದ ಸೀರೆಗಳನ್ನು ಅಪರಾಹ್ನ ಏಲಂ ಮಾಡಲಾಗುವುದು.**

**ಶ್ರೀಶಾರದಾ ಹವ್ಯಾಸಿ ಯಕ್ಷಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ ''ಕಂಸ ದಿಗ್ವಿಜಯ-ಕಂಸ ವಧೆ' ಸಮಯ: ಸಂಜೆ 6-00ರಿಂದ 9-00**

**ಕಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-7ನೇ ತರಗತಿ ವರೆಗೆ**

## ಶ್ರೀಶಂಕರ ಭಗವತ್ಪಾದ ವಿರಚಿತ
## ಸೌಂದರ್ಯಲಹರೀ

ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ।
ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚಾದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥ 1 ॥

ತನೀಯಾಂಸಂ ಪಾಂಸುಂ ತವ ಚರಣಪಂಕೇರುಹಭವಂ
ವಿರಿಂಚಿಃ ಸಂಚಿನ್ವನ್ ವಿರಚಯತಿ ಲೋಕಾನವಿಕಲಮ್ ।
ವಹತ್ಯೇನಂ ಶೌರಿಃ ಕಥಮಪಿ ಸಹಸ್ರೇಣ ಶಿರಸಾಂ
ಹರಂ ಸಂಕ್ಷುಭ್ಯೈನಂ ಭಜತಿ ಭಸಿತೋದ್ಧೂಲನವಿಧಿಮ್ ॥ 2 ॥

ಅವಿದ್ಯಾನಾಮಂತಸ್ತಿಮಿರಮಿಹಿರದ್ವೀಪನಗರೀ
ಜಡಾನಾಂ ಚೈತನ್ಯಸ್ತಬಕಮಕರಂದಸ್ರುತಿಝುರೀ ।
ದರಿದ್ರಾಣಾಂ ಚಿಂತಾಮಣಿಗುಣನಿಕಾ ಜನ್ಮಜಲಧೌ
ನಿಮಗ್ನಾನಾಂ ದಂಷ್ಟ್ರಾ ಮುರರಿಪುವರಾಹಸ್ಯ ಭವತಿ ॥ 3 ॥

ತ್ವದನ್ಯಃ ಪಾಣಿಭ್ಯಾಮ್ ಅಭಯವರದೋ ದೈವತಗಣಃ
ತ್ವಮೇಕಾ ನೈವಾಸಿ ಪ್ರಕಟಿತವರಾಭೀತ್ಯಭಿನಯಾ ।
ಭಯಾತ್ತ್ರಾತುಂ ದಾತುಂ ಫಲಮಪಿ ಚ ವಾಂಛಾ ಸಮಧಿಕಂ
ಶರಣ್ಯೇ ಲೋಕಾನಾಂ ತವ ಹಿ ಚರಣಾವೇವ ನಿಪುಣೌ ॥ 4 ॥

**ಹಿರಿಯರ ವಿಭಾಗಕ್ಕೆ ಕಂಠಪಾಠ ಸ್ಪರ್ಧೆಗೆ-8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ**

## ಭಗವದ್ಗೀತೆ : ದ್ವಾದಶೋಽಧ್ಯಾಯಃ - ಭಕ್ತಿಯೋಗಃ

ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ ॥ ೧ ॥

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥ ೨ ॥

ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂ ಚ ಕೂಟಸ್ಥಮಚಲಂ ಧ್ರುವಮ್ ॥ ೩ ॥

ಸಂನಿಯಮ್ಯೇಂದ್ರಿಯಗ್ರಾಮಂ ಸರ್ವತ್ರ ಸಮಬುದ್ಧಯಃ ॥
ತೇ ಪ್ರಾಪ್ನುವಂತಿ ಮಾಮೇವ ಸರ್ವಭೂತಹಿತೇ ರತಾಃ ॥ ೪ ॥

ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥ ೫ ॥

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥ ೬ ॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಮ್ ॥ ೭ ॥

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ೮ ॥


ಅಥ ಚಿತ್ತಂ ಸಮಾಧಾತುಂ ನ ಶಕ್ನೋಷಿ ಮಯಿ ಸ್ಥಿರಮ್ ।
ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥ ೯ ॥

ಅಭ್ಯಾಸೇಽಪ್ಯಸಮರ್ಥೋಽಸಿ ಮತ್ಕರ್ಮಪರಮೋ ಭವ ।
ಮದರ್ಥಮಪಿ ಕರ್ಮಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥ ೧೦ ॥

ಅಥೈತದಪ್ಯಶಕ್ತೋಽಸಿ ಕರ್ತುಂ ಮದ್ಯೋಗಮಾಶ್ರಿತಃ ।
ಸರ್ವಕರ್ಮಫಲತ್ಯಾಗಂ ತತಃ ಕುರು ಯತಾತ್ಮವಾನ್ ॥ ೧೧ ॥

ಶ್ರೇಯೋ ಹಿ ಜ್ಞಾನಮಭ್ಯಾಸಾಜ್ಜ್ಞಾನಾದ್ಧ್ಯಾನಂ ವಿಶಿಷ್ಯತೇ ।
ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾಂತಿರನಂತರಮ್ ॥ ೧೨ ॥

# ''ಹರಿಕಥೆ'' ಅಪೇಕ್ಷಿತವೇ? ಅನಪೇಕ್ಷಿತವೇ?-೨



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

ನೀತಿ, ಸಾಹಿತ್ಯ, ಸುಭಾಷಿತಗಳ ಜ್ಞಾನ :- ದಾಸನಾದವನು ಉತ್ತಮ ಸಾಹಿತ್ಯ ಜ್ಞಾನವನ್ನು ಹೊಂದಿರಬೇಕಾದುದು ಅನಿವಾರ್ಯ. ಹರಿಕಥೆಯ ಆರಂಭದ ಪೀಠಿಕೆಯಲ್ಲಿ ದಾಸ ಸಾಹಿತ್ಯದಿಂದ ಬೋಧಕವಾದ ಕೀರ್ತನೆಯೊಂದನ್ನು ಹಾಡಿ ಅದನ್ನು ವಿವರಿಸುವುದು ಅನಿವಾರ್ಯ. ಆ ಕೀರ್ತನೆಯು ನೀಡುವ ಸಂದೇಶವು ತಾನು ಆ ದಿನ ಹೇಳುವ ಕಥೆಗೆ ಸಂಬಂಧಿಸಿದುದಾಗಿರಬೇಕು. ಹಾಗೆಯೇ ಮುಂದುವರಿದು ಕಥೆಯು ಸಾಗುತ್ತಿರುವ ಸಂದರ್ಭದಲ್ಲಿ ಆಗಾಗ ಸನ್ನಿವೇಶಕ್ಕೆ ತಕ್ಕಂತೆ ನೀತಿಯನ್ನು ಸಾರುವ ಸಾಹಿತ್ಯ ಭಾಗಗಳ ಪದ್ಯಗಳನ್ನೋ, ವಚನಗಳನ್ನೋ ಉದಾಹರಿಸುತ್ತಿರಬೇಕು. ಇದಕ್ಕಾಗಿ ಕವಿ ಸರ್ವಜ್ಞ, ಬಸವಣ್ಣ, ಚನ್ನಬಸವಣ್ಣ, ಹೊನ್ನಮ್ಮ, ಸೋಮೇಶ್ವರ ಕವಿ, ಚೆಲ್ವನಾರಾಯಣ ಶತಕದ ಆಳಸಿಂಗಾಚಾರ್ಯ, ಮಂಕುತಿಮ್ಮನ ಕಗ್ಗದ ಡಿ.ವಿ.ಗುಂಡಪ್ಪ, ಸುಭಾಷಿತಗಳು ಮುಂತಾದುವುಗಳಿಂದ ಆಯ್ದ ನುಡಿಮುತ್ತುಗಳನ್ನು ಆಗಾಗ ಉದುರಿಸುತ್ತಿರಬೇಕು. ಇವುಗಳು ಬಹಳಷ್ಟು ಪರಿಣಾಮವನ್ನು ಬೀರುತ್ತವೆ. ಉದಾಹರಣೆಗೆ ''ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ'' ಎಂಬ ಬಸವಣ್ಣನ ವಚನ, ವಿದ್ಯಾಭ್ಯಾಸದ ಮಹತ್ವಿಕೆಯನ್ನು ಹೇಳುತ್ತಾ ''ವಿದ್ಯೆವುಳ್ಳವನ ಮುಖವು ಮುದ್ದು ಬರುವಂತಿಕ್ಕು'' ಎಂಬ ಸರ್ವಜ್ಞನ ವಚನ; ಹೆತ್ತವರ ಕರ್ತವ್ಯವನ್ನು ತಿಳಿಸುವ ''ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರದ ವಿದ್ಯೆಗಳನರಿಪದಿರ್ದೊಡೆ ಕೊಂದಂ'' ಎಂಬ ಸುಭಾಷಿತಕಾರನ ಕಂದ ಪದ್ಯ - ಇವುಗಳೆಲ್ಲ ಮಾನವನಿಗೆ ದಾರಿ ದೀಪಗಳು, ಕೈಕಂಬಗಳು, ಮಾರ್ಗದರ್ಶಕಗಳು. ಇಂಥವುಗಳನ್ನು ಸಂದರ್ಭಾನುಸಾರ ಕಥೆಯ ಮಧ್ಯದಲ್ಲಿ ಶ್ರೋತೃಗಳಿಗೆ ಮಂದಟ್ಟಾಗುವಂತೆ ತಿಳಿಯಹೇಳಿ ವಿವರಿಸಬೇಕಾದುದು ಹರಿದಾಸನಾದವನ ಕರ್ತವ್ಯವು.

ನೀತಿ ವಿಚಾರಗಳನ್ನು ಹೇಳುವಾಗ ಉಪನಿಷತ್ತು, ಭಗವದ್ಗೀತೆ ಮುಂತಾದುವುಗಳಿಂದಲೂ ಶ್ಲೋಕಗಳನ್ನು ಉದ್ಧರಿಸಿ ರಾಗವತ್ತಾಗಿ ಹೇಳಿ, ಅದರ ಅರ್ಥ, ಅದು ಮಾನವನಿಗೆ ನೀಡುವ ಸಂದೇಶ ಇತ್ಯಾದಿಗಳನ್ನು ವಿವರಿಸಬೇಕು. ಇವುಗಳೊಂದಿಗೆ ಕನಕದಾಸರ ಹರಿಭಕ್ತಿಸಾರ, ರತ್ನಾಕರ ವರ್ಣಿಯ ಶತಕಗಳ ಪದ್ಯ, ಸೋಮೇಶ್ವರ ಶತಕದ ನೀತಿಯನ್ನು ಸಾರುವ ಪದ್ಯಗಳು ಮುಂತಾದುವುಗಳನ್ನು ಸಂದರ್ಭಕ್ಕೆ ಸರಿಯಾಗಿ ಹೇಳಿ ಅವುಗಳ ಅರ್ಥವನ್ನು ಮಂದಟ್ಟು ಮಾಡುವುದರೊಂದಿಗೆ ಶ್ರೋತೃಗಳಿಗೆ ಸೂಕ್ತ ನೀತಿಯ ಸಂದೇಶಗಳನ್ನು ನೀಡಬೇಕು. ಇಂತಹ ಸಂದರ್ಭಗಳನ್ನು ಉಪಯೋಗಿಸಿಕೊಂಡು ತಾನು ಹೇಳುತ್ತಿರುವ ನೀತಿಯ ಸಂದೇಶಗಳು ಶ್ರೋತೃಗಳಿಗೆ ಸುಲಭವಾಗಿ ತಲುಪುವಂತೆ, ಅಲ್ಲಲ್ಲಿಗೆ ಮನರಂಜಕವಾದ, ಚುಟುಕಾದ ನೀತಿಕಥೆಗಳನ್ನು ಹೇಳುವುದರೊಂದಿಗೆ, ಆ ನೀತಿ ಕಥೆಗಳು ಉಪಕಥೆಗಳೆನಿಸದೆ ಮಾನವನಿಗೆ ನೀಡುವ ಹಿತೋಪದೇಶಗಳು ಎಂದು ಭಾಸವಾಗುತ್ತದೆ. ಇದರಿಂದಾಗಿ ಹರಿದಾಸನು ಸ್ವತಹಾ ಸಾಹಿತ್ಯ ಜ್ಞಾನವುಳ್ಳವನಾಗಿದ್ದಾನೆಂಬುದು ಶ್ರೋತೃಗಳಿಗೆ ಮಂದಟ್ಟಾಗುತ್ತದೆ. (ಮುಂದುವರಿಯುವುದು)



ತಾ.29-8-2010 ಆದಿತ್ಯವಾರದಂದು ಪಡುಬಿದ್ರಿ ಯಲ್ಲಿ ಸ್ಥಾನಿಕ ಬ್ರಾಹ್ಮಣ ಸಂಘವು ಉದ್ಘಾಟನೆ ಗೊಂಡಿತು.

### ಅಪ್ಪಚ್ಚಿ

ಇಲಿಯ
ಮೇಲೆ
ಡೊಳ್ಳು
ಹೊಟ್ಟೆಯ ಗಣಪ
ಭೂಮಿಗೆ
ಪಯಣ
ಹೊರಟರೆ
ಪಾಪ
ಇಲಿ
ಅಪ್ಪಚ್ಚಿ

**ಮಾರ್ಪಳ್ಳಿ**
**ಆರ್. ಮಂಜುನಾಥ್**
**ಶಿವಮೊಗ್ಗ**

### ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿಗೆ ದೇಣಿಗೆ ನೀಡಿದವರು

(...ಹಿಂದಿನ ಸಂಚಿಕೆಯಿಂದ)

| | | |
|---|---|---|
| 4. | ಡಾ। ಸುಧೀರ್ ರಾವ್, ಜೋಗೇಶ್ವರಿ ಈಸ್ಟ್, ಮುಂಬಯಿ | 11,111.00 |
| 5. | ಶ್ರೀ ವೈ. ಶಂಕರನಾರಾಯಣ ರಾವ್, ರಾಮನಗರ, ಪಡುಬಿದ್ರಿ | 5,000.00 |
| 6. | ಶ್ರೀ ಅಭಿಷೇಕ್ ಕೆ. ರಾವ್, ಲಕ್ಷ್ಮೀಂದ್ರನಗರ, ಉಡುಪಿ | 1,001.00 |
| 7. | ಶ್ರೀ ಬಿ. ಕೃಷ್ಣ ರಾವ್, ಲಕ್ಷ್ಮೀಂದ್ರನಗರ, ಉಡುಪಿ | 1,001.00 |


**ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ಕುಕ್ಕಿಕಟ್ಟೆ, ಉಡುಪಿ**

**ವಿದ್ಯಾರ್ಥಿ ವೇತನ - ಅರ್ಜಿಆಹ್ವಾನ**

ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ಕುಕ್ಕಿಕಟ್ಟೆ, ಉಡುಪಿ ಇದರ ವತಿಯಿಂದ ಕೊಡಲಾಗುವ ದಿ। ಡಾ। ವೈ. ಚಂದ್ರಶೇಖರ ರಾವ್ ಸ್ಮಾರಕ ವಿದ್ಯಾರ್ಥಿ ವೇತನಕ್ಕೆ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಾಶಸ್ತ್ಯ ನೀಡಲಾಗುವುದು. ಅರ್ಜಿಯನ್ನು ಬಿಳಿಹಾಳೆಯಲ್ಲಿ ತಮ್ಮ ವಿಳಾಸ, ಸಂಪರ್ಕ ಸಂಖ್ಯೆ (ಫೋನ್ ನಂ.) ಸಹಿತ ಬರೆದು, ಹಿಂದಿನ ವರ್ಷದ ಅಂಕಪಟ್ಟಿ, ಸ್ಟಡಿ ಸರ್ಟಿಫಿಕೇಟ್ ಹಾಗೂ ವರಮಾನದ ಪ್ರಮಾಣ ಪತ್ರದೊಂದಿಗೆ, ಈ ಕೆಳಗಿನ ವಿಳಾಸಕ್ಕೆ ತಾ.30-10-2010ರೊಳಗೆ ತಲುಪುವಂತೆ ಕಳುಹಿಸಬೇಕು.

**ಡಾ। ವೈ. ಸುದರ್ಶನ ರಾವ್, ಕೆನರಾ ಹೆಲ್ತ್ ಸೆಂಟರ್, ಅಂಜುಮಾನ್ ರಸ್ತೆ ಸಿಟಿಬಸ್‌ಸ್ಟ್ಯಾಂಡ್ ಬಳಿ, ಉಡುಪಿ - 576 101.**





**ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ**

ಅಂಚೆ : ಕೋಡಿಂಬಾಡಿ - 574 287, ಪುತ್ತೂರು ತಾಲೂಕು, ದ.ಕ.
ದೂರವಾಣಿ : 261010, ಮೊಬೈಲ್ : 9901247080

ಪ್ರಿಯ ಭಗವದ್ಭಕ್ತರೇ,

ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ

**''ನವರಾತ್ರಿ ಉತ್ಸವ''**

ಹಾಗೂ ತಾ.10-10-2010ನೇ ಆದಿತ್ಯವಾರ

**''ಚಂಡಿಕಾ ಹೋಮ''**

ಇದೇ ಬರುವ ತಾ.08-10-2010ರಿಂದ ತಾ.17-10-2010ರ ತನಕ ನಡೆಯಲಿರುವುದರಿಂದ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಕ್ಷೇತ್ರಕ್ಕೆ ಆಗಮಿಸಿ, ಶ್ರೀದೇವಿಯ ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಯಂ. ನಾಗೇಶ ಶರ್ಮ** — ಅರ್ಚಕರು
**ಅಧ್ಯಕ್ಷರು ಮತ್ತು ಸದಸ್ಯರು** — ಆಡಳಿತ ಮಂಡಳಿ



**Rao's 'ಮಾತೃಛಾಯಾ'ರವರ**

ಉಡುಪಿ ವಿಶಿಷ್ಟ ರುಚಿಯುಳ್ಳ

ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ

**-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-**

**ಭಾರತ್ ಸ್ಟೋರ್ಸ್**

**ರಥಬೀದಿ, ಉಡುಪಿ - 576 101. ಫೋನ್ : 2522444**



*ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.*

**ಸಂಪರ್ಕಿಸಿರಿ :**

**ಕೆ. ರಾಮಮೂರ್ತಿ ಭಟ್, ಪುರೋಹಿತರು**

**ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010**






**RAJESH POWER PRESS**

PRINTERS & PUBLISHERS

DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com

**QUALITY FIRST AND ALWAYS**



**ಎಮ್. ದೇವಾನಂದ್ ಭಟ್**

Cell :9845644556

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
ಎಡಪದವು - **574 164** (0824)-256374 (O) ಮಂಗಳೂರು, ದ.ಕ.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಈ ಗ್ರಂಥದ ಕಾಲ ನಿರ್ಣಯವನ್ನು ಮಾಡಲು ಅತ್ಯಂತ ಉಪಯುಕ್ತವಾದ ಸಾಧನೀಯ ಸಂಗತಿ ಇನ್ನೊಂದಿದೆ. 'ವೀರಭೂಪ'ನ ಆಸ್ಥಾನದಲ್ಲಿ ಆದ ನ್ಯಾಯ ತೀರ್ಮಾನವನ್ನು ಕುರಿತಾಗಿ ಪ್ರಸ್ತಾಪವನ್ನು ಈ ಗ್ರಂಥವು ಮಾಡುತ್ತದೆ. ಆಸ್ಥಾನದಲ್ಲಿ ಆದ ನ್ಯಾಯ ತೀರ್ಮಾನವನ್ನು ಕುರಿತಾಗಿ ಪ್ರಸ್ತಾಪವನ್ನು ಈ ಗ್ರಂಥವು ಮಾಡುತ್ತದೆ. ಈ ವೀರ ಭೂಪನು ವಿಜಯನಗರದ ವೈಸರಾಯನಾದ ವೀರಭೂಪನೇ ಇರಬೇಕು. (ವಿಜಯನಗರದ ಚಕ್ರವರ್ತಿ ಎರಡನೆಯ ಹರಿಹರೀಯನ ಮೊಮ್ಮಗ) ಶಾಸನಾದಿಗಳಿಂದ ಈ ವೀರ ಭೂಪತಿಯು ಕ್ರಿ.ಶ.1386ರ ಸುಮಾರಿಗೆ ಕರ್ನಾಟಕದ ನಗರಗಳಲ್ಲಿ ಒಂದಕ್ಕೆ ವೈಸರಾಯನಾಗಿ ನೇಮಕವಾದುದೆಂದು ತಿಳಿದು ಬರುತ್ತದೆ. ಗ್ರಾಮಪದ್ಧತಿಯು ಪ್ರಾಂತೀಯ ಕೇಂದ್ರದಲ್ಲಿ ಜರಗಿದ ನ್ಯಾಯ ಕ್ರಮವನ್ನು ವಿವರಿಸುವುದರಿಂದ, ಈ ಗ್ರಂಥವು ಖಂಡಿತ ವಾಗಿಯೂ ಕ್ರಿ.ಶ.14ನೇ ಶತಮಾನದ ಅಂತ್ಯಭಾಗಕ್ಕೆ ಸೇರಿದ್ದೆಂದು ನಿರ್ಣಯಿಸಬಹುದು.

11) ಗ್ರಾಮ ಪದ್ಧತಿಯಲ್ಲಿ ಮಯೂರ ವರ್ಮನು ಗೋರಾಷ್ಟ್ರವು ಅಬ್ರಾಹ್ಮಣ್ಯದೇಶವೆಂದು ಗೋದಾವರಿ ತೀರದಿಂದ ಅಂದರೆ ಅಹಿಚ್ಛತ್ರದಿಂದ ಉತ್ತಮರಾದ ಬ್ರಾಹ್ಮಣರನ್ನು ಕರೆತಂದನೆಂದು ತಿಳಿಯಪಡಿಸಿದೆ. ಆದರೆ ಅಹಿಚ್ಛತ್ರವು ಗೋದಾವರಿ ತೀರದಲ್ಲಿ ಇದೆ ಎಂಬುದು ಚರಿತ್ರೆಗೆ ವಿರುದ್ಧವಾದ ಒಕ್ಕಣೆ. ಈ ವಿಷಯದಲ್ಲಿ ಮಹಾಭಾರತದ ಪ್ರಮಾಣದಂತೆ, ಜೈನ ಬೌದ್ಧ ಸಾಹಿತ್ಯಕಾರರ ಉಲ್ಲೇಖಗಳನ್ನು ಮಧ್ಯಕಾಲದ ಇತಿಹಾಸಗಳನ್ನು ಸೇರಿಸಿ ವಿಚಾರನಡೆಸಿದ ಎಲ್ಲಾ ಭಾರತೀಯ ಅಥವಾ ಐರೋಪ್ಯ ಜಾತಕರ ನಿರ್ಣಯಗಳ ನಿಷ್ಕರ್ಷವನ್ನೇ ನಂದಲಾಲ್ ದೇವ್ ಎಂಬವರು ಬರೆದ "The Geographical Dictionary of Ancient and Medival India" ಎಂಬ ಗ್ರಂಥದಲ್ಲಿ, ಅಹಿಚ್ಛತ್ರವೂ, ಅಹಿಕ್ಷೇತ್ರವೂ ಒಂದೇ ಎಂಬುದಾಗಿಯೂ, ಅದು ಉತ್ತರ ಪಾಂಚಾಲದ ಕೇಂದ್ರವೆಂಬುದಾಗಿಯೂ ವಿಷದವಾಗಿ ತಿಳಿಸಿದೆ.

12) ಸಹ್ಯಾದ್ರಿ ಖಂಡದ ಉತ್ತರಭಾಗದಲ್ಲಿ ಕೋಟೇಶ್ವರ ಗ್ರಾಮ ವಿಚಾರವೆಂಬ ಹದಿನೈದನೆಯ ಅಧ್ಯಾಯದಲ್ಲಿ ಪತಿತರಾದ ಕೋಟೇಶ್ವರ ಬ್ರಾಹ್ಮಣರ ಉದ್ಧಾರದ ಕುರಿತು ವಿವರವಿದೆ. 'ಮಂದರಾದ್ರಿಗೆ ಸಮಾನನಾದ ಏತಂಡ ಮುನಿಯು (ಕಲಿಯುಗದಲ್ಲಿ ಮಧ್ವಮತ ಶ್ರೇಷ್ಠರಾಗಿರುವವರು) ತಪ್ತಮುದ್ರೆಯನ್ನೊತ್ತಿ, ವೈಶಂಭರವೆಂಬ ಮತವನ್ನು ಕಲ್ಪನೆ ಮಾಡಿ, ಆ ಪಂಡಿತನು ಅನಂತರ ವಿಷ್ಣುನಾಮಾಂಕಿತವಾದ ಅಷ್ಟಾಕ್ಷರಿಯನ್ನು ಅವರಿಗೆ ಉಪದೇಶ ಮಾಡಿದನು. ಕೋಟದ ಬ್ರಾಹ್ಮಣರಿಗೂ ಕೋಟೇಶ್ವರದ ಬ್ರಾಹ್ಮಣರಿಗೂ ಯಾವುದೋ ಕಾರಣದಿಂದ ಭಿನ್ನ ಭಾವಗಳು ಬೆಳೆದು ಕೋಟೇಶ್ವರದವರು ಪತಿತರಾದವರೆಂದು ಪರಿಗಣಿಸಲ್ಪಟ್ಟ ಅನಂತರ ಅವರನ್ನು ವೈಷ್ಣವಮತಕ್ಕೆ ಪರಿವರ್ತಿಸಿದುದು ಶ್ರೀ ಸೋದೆ ವಾದಿರಾಜಸ್ವಾಮಿಯವರೆಂಬುದು ಎಲ್ಲರಿಗೂ ತಿಳಿದ ಸಂಗತಿ. ಆದುದರಿಂದ ಈ ಗ್ರಂಥದಲ್ಲಿ ಈ ಸಂಗತಿಗೆ ಪುರಾಣದ ಕವಚವನ್ನಿತ್ತುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಗ್ರಂಥದ ನಿರ್ಮಾಣವು ಹಾಗಾದರೆ 15ನೆಯ ಶತಮಾನದಲ್ಲಿ ಎಂದು ತಿಳಿಯಲು ಕಾರಣವಾಗುತ್ತದೆ.

# ನೀನು ಇತರರಿಂದ ಏನನ್ನು ಬಯಸುವೆಯೋ ಅದನ್ನೇ ಮೊದಲು ನೀನು ಇತರರಿಗೆ ಮಾಡು

- ಸೌಮ್ಯಶ್ರೀ ಡಿ. ಭಟ್,
ಶ್ರೀಶಾರದಾ ದೇವಸ್ಥಾನ, ಕುಂಜಿಬೆಟ್ಟು

**"ಕಾನೂನು ಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖಗಳಾಗಬೇಕು" - ಡಾ। ವಿರೇಂದ್ರ ಹೆಗ್ಗಡೆ.**

ನಾವು ಯಾವಾಗಲೂ ಇತರರಿಂದ ಸುಖ, ಸೌಕರ್ಯ, ನೆಮ್ಮದಿ ಮತ್ತು ಅವಕಾಶಗಳನ್ನು ನಿರೀಕ್ಷಿಸುತ್ತೇವೆ. ನಮ್ಮ ಸರದಿ ಬಂದಾಗ 'ಉಳ್ಳವರು ಶಿವಾಲಯವ ಮಾಡುವರಯ್ಯ, ನಾನೇನು ಮಾಡಲಿ ಬಡವನಯ್ಯ' ಅನ್ನುತ್ತೇವೆ. ಬಡವನು ಆಲಯವನ್ನು ಭೌತಿಕ ವಸ್ತುಗಳಿಂದ ಕಟ್ಟಲು ಸಾಧ್ಯವಿಲ್ಲದೆ ಇರಬಹುದು. ಆದರೆ ಕಾಲನ್ನು ಕಂಬವನ್ನಾಗಿಸಿ, ಎದೆಯನ್ನು ಗರ್ಭಗುಡಿಯನ್ನಾಗಿಸಿ ದೇವರಿಗೆ ಆಲಯ ಕಟ್ಟಲು ಬಸವಣ್ಣನವರು ಹೇಳಿಕೊಟ್ಟಿಲ್ಲವೇ?

ನಾವು ರಸ್ತೆಯಲ್ಲಿ ವಾಹನ ಚಾಲನೆ ಮಾಡುತ್ತಿರುವಾಗ ಇತರರು ರಸ್ತೆ ನಿಯಮಗಳನ್ನು ಪಾಲಿಸಲಿ ಎಂದು ನಿರೀಕ್ಷಿಸುತ್ತೇವೆ. ಕ್ಷಣಕಾಲ ನಾವೆಷ್ಟು ಅದನ್ನು ಪಾಲಿಸುತ್ತಿದ್ದೇವೆ ಎಂದು ಯೋಚಿಸುವುದಿಲ್ಲ. ಯಾಕೆಂದರೆ ಕಾನೂನು ನಮಗೂ ಅದೇ ಆಗಿರುತ್ತದೆ. ಅಲ್ಲವೇ?

ನಮ್ಮ ಸ್ವಾರ್ಥಕ್ಕೆ ನಾವು ರಸ್ತೆಯಲ್ಲಿ ಹಾರ್ನ್ ಮಾಡುತ್ತೇವೆ. ಆದರೆ ಚೀನಾದಲ್ಲಿ ಹಾರ್ನ್ ಮಾಡಿದರೆ ಮುಂದಿರುವ ವಾಹನದವನು ಏನೋ ತಪ್ಪು ಮಾಡಿದ್ದಾನೆಂದು ಸೂಚನೆಯಾಗಿರುತ್ತದೆ. ಅಮೇರಿಕದಲ್ಲಿ ವಾಹನಗಳ ಹೆಡ್‌ಲೈಟ್‌ನ ಪ್ರಕಾಶ ಎಷ್ಟು ಕಡಿಮೆಯಾಗಿರುತ್ತದೆ ಎಂದರೆ ಎದುರು ಬರುವ ವಾಹನಕ್ಕೆ ಕಿಂಚಿತ್ತು ತೊಂದರೆಯಾಗುವುದಿಲ್ಲ. ಆದರೆ ನಾವು ಸ್ಪರ್ಧಾತ್ಮಕವಾಗಿ ಒಬ್ಬನಿಗಿಂತ ಒಬ್ಬನು ಹೆಚ್ಚು ಪ್ರಕಾಶಮಾನವಾದ ಹೆಡ್‌ಲೈಟ್ ಹಾಕಿಕೊಳ್ಳುವುದಲ್ಲದೆ ಎದುರಿಗೆ ಬರುವ ಚಾಲಕನನ್ನು ಬಾಯಿಗೆ ಬಂದಂತೆ ಬೈಯುತ್ತೇವೆ.

ಲಾರ್ಡ್ ಚರ್ಚಿಲ್‌ನ ಮಗನನ್ನು ನಮ್ಮ ರೈತ ಪ್ಲೆಮಿಂಗ್ ಕೆಸರಿನಿಂದ ಮೇಲೆತ್ತಿ ರಕ್ಷಿಸದಿದ್ದರೆ ಚರ್ಚಿಲ್ ರೈತನ ಮಗನನ್ನು ಕರೆದೊಯ್ದು ಮೆಡಿಕಲ್ ಓದಿಸುತ್ತಿರಲಿಲ್ಲವೇನೋ. ಹಾಗೆಯೇ ರೈತನ ಮಗ ಸರ್ ಅಲೆಕ್ಸಾಂಡರ್ ಫ್ಲೆಮಿಂಗ್ ನ್ಯೂಮೋನಿಯಾ ರೋಗಕ್ಕೆ ತುತ್ತಾದ ಚರ್ಚಿಲ್ ಮಗ ಸರ್ ವಿನ್‌ಸ್ಟನ್ ಚರ್ಚಿಲ್‌ನನ್ನು ಪೆನಿಸಿಲಿನ್‌ನಿಂದ ರಕ್ಷಿಸುತ್ತಿರಲಿಲ್ಲವೇನೋ. ಇತರರಿಂದ ನಾವು ಬಯಸಲಿ ಬಯಸದೇ ಇರಲಿ "ಕರ್ಮಣ್ಯೇ ವಾಧಿಕಾರಸ್ತೆ ಮಾ ಫಲೇಷು ಕದಾಚನ" ಎಂದು ಶ್ರೀ ಕೃಷ್ಣ ಹೇಳಿದ ನಲ್ನುಡಿ ಸದಾ ನಮ್ಮ ಮನದಲ್ಲಿರಬೇಕು. "ಪರೋಪಕಾರಂ ಇದಂ ಶರೀರಂ" ಎಂಬುದು ಕೇವಲ ನಾಣ್ನುಡಿಯಾಗದೆ ಕಾರ್ಯರೂಪಕ್ಕೆ ಬರಬೇಕು.

ಸರ್ವೇ ಸಾಮಾನ್ಯವಾಗಿ ನಾವು ಗಮನಿಸುವ ಇನ್ನೊಂದು ಸಾಮಾನ್ಯ ವಿಷಯ 'ಗೆಲುವಿನ ಪಾಲುದಾರರೆಂದು ಹೇಳಿಕೊಳ್ಳುವವರು ಹಲವರು. ಆದರೆ ಸೋಲು ಬಂದಾಗ ಅದರ ಕಾರಣವನ್ನು ಬೇರೆಯವರ ಹೆಗಲ ಮೇಲೆ ಹಾಕುತ್ತಾರೆ. ಇದು ಎಷ್ಟರ ಮಟ್ಟಿಗೆ ಸಮಂಜಸ?

ಆಂಗ್ಲ ಗಾದೆಯೊಂದು ಹೀಗೆ ಹೇಳುತ್ತದೆ "Attempts may fail, but there should not be failure to attempt" ನಮ್ಮ ಸಾಮರ್ಥ್ಯದ ಮೇಲೆ ವಿಶ್ವಾಸವಿಲ್ಲದೆ ನಾವು ಹಲವಾರು ಕೆಲಸಕ್ಕೆ ಕೈಹಾಕದೇ ಇರುವುದೂ ಉಂಟು. ಅವಕಾಶಗಳನ್ನು ಉಪಯೋಗಿಸಿದಾಗ ಮಾತ್ರ ನಮ್ಮ ಸಾಮರ್ಥ್ಯದ ಅರಿವು ನಮಗೆ ತಿಳಿಯುತ್ತದೆ.

ಮೈಥಿಲೀಶರಣ ಗುಪ್ತರು ಒಮ್ಮೆ ಮೆಟ್ಟಿಲು ಏರುತ್ತಿರುವಾಗ ಮೇಲಿನಿಂದ ಬಂದ ವ್ಯಕ್ತಿಯೊಬ್ಬ "ನಾನು ಮೂರ್ಖರಿಗೆ ದಾರಿ ಬಿಡುವುದಿಲ್ಲ" ಎಂದು ಅಡ್ಡನಿಂತನಂತೆ. ಗುಪ್ತರು ನಗುತ್ತ "ನಾನು ಅಂತಹವರಿಗೆ ಮೊದಲು ದಾರಿ ಬಿಡುತ್ತೇನೆ" ಎಂದು ಬದಿಗೆ ನಿಂತರಂತೆ. ಇತರರೇ ನಮಗೆ ದಾರಿ ಬಿಡಬೇಕೆಂದು ನಮ್ಮ ಒಳಮನಸ್ಸು ಹೇಳುವುದು ಸಹಜ. ಗುಪ್ತರಂತೆ ನಾವೂ ಯೋಚಿಸಿ ಆ ಕೆಲಸವನ್ನು ನಾವೇ ಏಕೆ ಮಾಡಬಾರದು?

# ಭಾರತ ಈಗ ಸ್ವತಂತ್ರ ರಾಷ್ಟ್ರ - ಆದರೆ?

- ಎಂ. ಎಸ್. ರಘುನಾಥ ರಾವ್,
ದರ್ಬೆ, ಪುತ್ತೂರು.

ದೇಶದ ಅಭಿವೃದ್ಧಿಯು ಆಯಾ ದೇಶದ ಪ್ರಜೆಯ ತಲಾ ಆದಾಯದ ಮೇಲೆ ನಿರ್ಧರಿತವಾಗುವುದಲ್ಲ. ಬದಲಾಗಿ ಆ ದೇಶದ ನಾಗರಿಕರ ಮಾನಸಿಕ ಸ್ಥಿತಿ (Mind Set)ಯ ಮೇಲೆ ನಿರ್ಧರಿತವಾಗುತ್ತದೆ. ದೇಶದ ಅಭಿವೃದ್ಧಿಯು ನಾಗರಿಕರ ದೈನಂದಿನ ನಡವಳಿಕೆಯಲ್ಲಿ ಪ್ರತಿಫಲನವಾಗಬೇಕು. ಭಾರತದಲ್ಲಿ ಒಬ್ಬ ಸಾಮಾನ್ಯ ವಾಹನ ಚಾಲಕ ಸಿಗ್ನಲ್‌ನ ಬಳಿ ಪೋಲೀಸ್ ಇದ್ದರೆ ಮಾತ್ರ ಸಂಚಾರಿ ನಿಯಮ (Traffic Rules) ಪಾಲಿಸುತಾನೆ. ನಮ್ಮ ಮನೆಗಳ ಸುತ್ತುಮುತ್ತು ಇರುವ ಕಸ ಕೊಳೆಗಳನ್ನು ಸಾರ್ವಜನಿಕ ರಸ್ತೆಗೆ ಎಸೆಯುತ್ತೇವೆ. ನಮ್ಮ ಅಸಹನೆಗಳನ್ನು ಸರಕಾರಿ ಬಸ್‌ಗಳ ಮೇಲೆ, ಬೀದಿ ದೀಪಗಳ ಮೇಲೆ ಕಲ್ಲೆಸೆಯುವುದರಿಂದ ಪ್ರಕಟಪಡಿಸುತ್ತೇವೆ. ಸಿಕ್ಕಿದಲ್ಲೆಲ್ಲಾ ಉಗುಳುತ್ತೇವೆ. ಒಟ್ಟಾರೆಯಾಗಿ ನಾವು ನಮ್ಮ ಸ್ವಾತಂತ್ರಕ್ಕೆ ಬೇಕಾದ ಬೆಲೆಯನ್ನು ತೆರುತ್ತಿಲ್ಲ. ಸ್ವಾತಂತ್ರ್ಯ ದೊರಕಿರುವುದು ಈ ದೇಶದ ಅಭಿವೃದ್ಧಿಗಾಗಿ ಅಂದರೆ ದೇಶದ ಕೊಟ್ಟ ಕೊನೆಯ ವ್ಯಕಿಯ ಸ್ವಾತಂತ್ರ್ಯಕ್ಕಾಗಿ ಮತ್ತು ಜಾಗತಿಕ ವ್ಯವಸ್ಥೆಯಲ್ಲಿ ನಮ್ಮ ಗೌರವವನ್ನು ಎತ್ತರಿಸುವುದಕ್ಕಾಗಿ ಎಂಬುದನ್ನು ಪೂರ್ತಿ ಮರೆತಿದ್ದೇವೆ. ಪ್ರತಿಯೊಬ್ಬ ನಾಗರಿಕನು ಕಾನೂನನ್ನು ಗೌರವಿಸಲು, ಶಿಸ್ತನ್ನು ಪಾಲಿಸಲು, ತೆರಿಗೆ ವ್ಯಾಪ್ತಿಗೆ ಒಳಪಡಲು, ಮನೆ, ನಗರಗಳನ್ನು ಶುಚಿಯಾಗಿಡಲು ತನ್ನ ಹಕ್ಕುಗಳು ಮಾತ್ರವಲ್ಲ ಕರ್ತವ್ಯಗಳನ್ನು ನೆರವೇರಿಸಲು ಬದ್ಧನಾಗಿರಬೇಕು. ಇಂದು ಬರೀ ಕಾನೂನಿನ ಭಯಕ್ಕೆ ಮಾತ್ರ ಎಲ್ಲ ನಿಯಮಗಳನ್ನು ಪಾಲಿಸಲಾಗುತ್ತಿದೆ. ಇಂತಹ ಶಿಸ್ತಿಗೆ ಅರ್ಥವಿರುವುದಿಲ್ಲ.


ಜಗತ್ತಿನ ಮುಂದುವರಿದ ರಾಷ್ಟ್ರಗಳಾದ ಸ್ವೀಡನ್, ಫಿನ್‌ಲ್ಯಾಂಡ್ ಮುಂತಾದ ರಾಷ್ಟ್ರಗಳಿಂದ ಭ್ರಷ್ಟಾಚಾರರಹಿತ ಆಡಳಿತ. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾದಿಂದ ಹೊಸ ಹೊಸ ಆವಿಷ್ಕಾರಗಳು–ಸಾಹಸ ಪ್ರವೃತ್ತಿ, ಜಪಾನಿನಿಂದ ಉತ್ಕೃಷ್ಟತೆ ಮತ್ತು ಒಟ್ಟಾಗಿ ದುಡಿಯುವ ನಾಗರಿಕತೆ, ಸಿಂಗಾಪುರದಿಂದ ಸ್ವಾತಂತ್ರ್ಯವನ್ನು ಗೌರವಿಸುವ–ಕಾಪಾಡುವ ಆದರ್ಶ, ಚೈನಾದಿಂದ ಉತ್ಪಾದನಾ ವಲಯದಲ್ಲಿ ಕ್ರಾಂತಿಕಾರಿ ಸಾಧನೆ, ಬ್ರಿಟನ್, ಜರ್ಮನಿಯಿಂದ ಶಿಸ್ತು ಇತ್ಯಾದಿ ನಾವು ಜಗತ್ತಿನಿಂದ ಕಲಿಯಲು ಬೇಕಷ್ಟಿದೆ. ಆದರೆ ಭಾರತದಲ್ಲಿ ಒಟ್ಟಾರೆಯಾಗಿ ಹಣ ಮಾಡುವ ಧಾವಂತ ಎಲ್ಲರದು. ನಮ್ಮಲ್ಲಿ ರಾಜಕಾರಣ ಕೂಡಾ ಹಣ ಮಾಡುವ ಒಂದು ದಂಧೆಯಾಗಿದೆ, ಕೈಗಾರಿಕೆ ಯಾಗಿದೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಕಪ್ಪು ಹಣ (Black Money) ಸ್ವಿಸ್ ಬ್ಯಾಂಕಿನಲ್ಲಿ ಕೂಡಿಟ್ಟ ರಾಷ್ಟ್ರ ಭಾರತ. ಜಗತ್ತಿನ ವಿವಿಧ ದೇಶದ ರಾಜಕಾರಣಿಗಳು, ಉದ್ಯಮಿಗಳು, ರಾಷ್ಟ್ರ ದ್ರೋಹಿ ಭೂಗತ ಜಗತ್ತಿನ ಪಾತಕಿಗಳು ಸ್ವಿಸ್ ಬ್ಯಾಂಕ್‌ನಲ್ಲಿ ಇಟ್ಟ ಠೇವಣಿ ಈ ಕೆಳಗಿನಂತಿದೆ :

ಭಾರತ - 1891 ಬಿಲಿಯನ್ ಡಾಲರ್, ರಷ್ಯಾ - 610 ಬಿಲಿಯನ್ ಡಾಲರ್, ಚೈನಾ - 213 ಬಿಲಿಯನ್ ಡಾಲರ್, ಯು.ಕೆ. - 210 ಬಿಲಿಯನ್ ಡಾಲರ್, ಉಕ್ರೇನ್ - 140 ಬಿಲಿಯನ್ ಡಾಲರ್, ಜಗತ್ತಿನ ಉಳಿಕೆ ದೇಶಗಳು - 300 ಬಿಲಿಯನ್ ಡಾಲರ್

ಈ ಮೇಲಿನ ವಿಚಾರವನ್ನು ಗಮನಿಸಿದಾಗ ವಿದೇಶಿಯರು ನೂರಾರು ವರ್ಷಗಳಲ್ಲಿ ಭಾರತವನ್ನು ಲೂಟಿ ಮಾಡಿದ ಮೊತ್ತಕ್ಕಿಂತಲೂ ಅಧಿಕ ಹಣವು ಸ್ವತಂತ್ರ ಭಾರತದ 63 ವರ್ಷಗಳಲ್ಲಿ ಈ ಬಡದೇಶದಿಂದ ನಮ್ಮವರಿಂದಲೇ ಲೂಟಿಯಾಗಿದೆ. ಅಷ್ಟೂ ಸಾಲದ್ದಕ್ಕೆ ಈ ಹುಚ್ಚು ರಾಜಕಾರಣಿಗಳು ಧರ್ಮ, ಜಾತಿ, ಒಳಜಾತಿ, ಪಂಗಡ, ಭಾಷೆ, ಮತಾಂಧತೆ, ರಾಜ್ಯದ ಗಡಿಗಳು, ನೀರು ಹಂಚಿಕೆ ಮುಂತಾದ ಹೆಸರಿನಲ್ಲಿ ಜನರನ್ನು ಒಡೆದು ಜನರನ್ನು ನಿರ್ಜೀವ ಓಟುಗಳಾಗಿ ಪರಿವರ್ತಿಸಿದ್ದಾರೆ.

**ಈ ನಮ್ಮ ಮುಂದೆ ಇರುವ ಸವಾಲುಗಳು :** ಈಗ ನಾವು ಬರಿಯ ಕಾಗದದ ಓಟುಗಳಾಗದೆ ಸ್ವತಂತ್ರ ಭಾರತದ ಗೌರವಾನ್ವಿತ ಪ್ರಜೆಗಳಾಗಿ ಹೇಗೆ ಬದುಕಬಹುದು, 63 ವರ್ಷಗಳು ಗೊತ್ತುಗುರಿಯಿಲ್ಲದೆ ವ್ಯಕಿ ಸ್ವಾತಂತ್ರ್ಯವನ್ನು, ಭಾರತದ ಪ್ರಜಾಪ್ರಭುತ್ವವನ್ನು ಪ್ರಪಾತದ ಅಂಚಿಗೆ ತಂದು ನಿಲ್ಲಿಸಿದ ಈ ವ್ಯವಸ್ಥೆಯಲ್ಲಿ ನಮ್ಮ ಪಾತ್ರ ಏನು? ಎಂಬ ಬಗ್ಗೆ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನೂ ಚಿಂತಿಸಲು ಇದು ಸಕಾಲ... ಕಾಲ ಮಿಂಚುವ ಮುನ್ನ...


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (0)

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.


ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

**ರಾಮಾ ಅಟೋಮೊಬೈಲ್ಸ್**


ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

ಫೋನ್ : 2454355, ಮೊಬೈಲ್ : 94485 45702



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



## ಮಾಂಗಲ್ಯಂ ತಂತುನಾನೇನ ....

ಉಡುಪಿಯ ಶ್ರೀಮತಿ ಉಷಾ ರಾವ್ ಮತ್ತು ಶ್ರೀ ವೈ. ಮೋಹನ್ ರಾವ್ ಇವರ ಪುತ್ರ **ದೀಪಕ್** ಹಾಗೂ ಬಾರ್ಕೂರಿನ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಪ್ರಕಾಶ ಭಾಗವತ್ ಇವರ ಪುತ್ರಿ **ಪ್ರಿಯಾ** ಇವರ ವಿವಾಹವು ತಾ.29-8-2010ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು. ಮರುದಿನ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೂತನ ವಧೂವರರ ಗೃಹಪ್ರವೇಶ ಸಮಾರಂಭದ ಪ್ರಯುಕ್ತ ಜರಗಿದ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಆರತಕ್ಷತೆ ಸಂದರ್ಭದಲ್ಲಿ ನಮ್ಮ ಸಮಾಜದ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು.

★★★★

ಹೊಸ್ಕೋಟೆ ಪಿರಿಯಣ್ಣ ರಾವ್‌ರವರ ತಮ್ಮ ಎಚ್.ಕೃಷ್ಣಯ್ಯ ಇವರ ದ್ವಿತೀಯ ಪುತ್ರ **ಶ್ರೀಪಾದ** ಹಾಗೂ ಚೆರ್ವತ್ತೂರು ದಿ| ನಾರಾಯಣ ರಾವ್ ರವರ ಪುತ್ರಿ **ರಾಜೀವಿ** ಇವರ ವಿವಾಹವು ತಾ.13-08-2010ರಂದು ಹೊಸ್ಕೋಟೆ ವರನ ಸ್ವಗೃಹದಲ್ಲಿ ನೆರವೇರಿತು.

## ಹನಿಗವನಗಳು



**ನಕ್ಕುಬಿಡಲು**

ಹಾಸ್ಯದ
ಅಧಿದೇವತೆ
ಡೊಳ್ಳು ಹೊಟ್ಟೆಯ
ಗಣಪನಿಗೆ-ನಗಿಸಿ
ನಾವು-ನೀವು
ನಕ್ಕು ಬಿಡಲು
ಒಂದಿಷ್ಟು
ತಮಾಷೆಗಾಗಿ
ಬರೆದ ಹನಿಗವನಗಳು

**ಮಾದರಿ**

ಭೂಮಿ-ಸುತ್ತಲು
ಹೇಳಿದರೆ
ತಂದೆ-ತಾಯಿಯರ
ಸುತ್ತಿ
ಮೂರು ಲೋಕ
ಸುತ್ತಿದ-ಕಥೆ
ಹೆಣೆದ-ಜಾಣ
ಗಣಪ
ನಮ್ಮಂತ
ಕೈಲಾಗದವರಿಗೆ
ಮಾದರಿ
ನಮೋ ನಮೋ ರೀ

**ಮಾರ್ಪಳ್ಳಿ ಆರ್. ಮಂಜುನಾಥ್, ಶಿವಮೊಗ್ಗ**

## ಕನ್ಯಾ ಮಾಸ ವಿಶೇಷ ದಿನಗಳು

| | |
|---|---|
| 16-09-2010 | ಕನ್ಯಾ ಸಂಕ್ರಮಣ |
| 18-09-2010 | ಸರ್ವೇಕಾದಶೀ |
| 20-09-2010 | ಪ್ರದೋಷಃ |
| 22-09-2010 | ಅನಂತ ಚತುರ್ದಶೀ |
| 23-09-2010 | ಪೂರ್ಣಿಮಾ |
| 24-09-2010 | ಮಹಾಲಯಾರಂಭ |
| 26-09-2010 | ಸಂಕಷ್ಟಹರ ಚತುರ್ಥಿ (ಚಂದ್ರೋದಯ ಘಂಟೆ ರಾತ್ರಿ, 8-29ಕ್ಕೆ) |
| 27-09-2010 | ಮಹಾನಕ್ಷತ್ರ, ಹಸ್ತಾ ಪ್ರಾರಂಭ |
| 04-10-2010 | ಸರ್ವೇಕಾದಶೀ |
| 05-10-2010 | ಪ್ರದೋಷಃ |
| 07-10-2010 | ಸರ್ವ ಪಿತೃ ಅಮಾವಾಸ್ಯಾ (ಮಹಾಲಯ ಅಮಾವಾಸ್ಯಾ) |
| 08-10-2010 | ನವರಾತ್ರಿ ಆರಂಭ |
| 11-10-2010 | ಲಲಿತಾ ಪಂಚಮಿ |
| 13-10-2010 | ಶಾರದಾ ಪೂಜಾರಂಭ |
| 16-10-2010 | ಮಹಾನವಮಿ |
| 17-10-2010 | ವಿಜಯದಶಮಿ, ತುಲಾಸಂಕ್ರಮಣ |

## ಅಭಿನಂದನೆ

### ಪ್ರೊ| ಸಾಂತೂರು ಸುಬ್ರಹ್ಮಣ್ಯ ರಾವ್




ಪ್ರೊ| ಸಾಂತೂರು ಸುಬ್ರಹ್ಮಣ್ಯ ರಾವ್ ಇವರು ಬಂಟಕಲ್‌ನಲ್ಲಿ ಹೊಸದಾಗಿ ಪ್ರಾರಂಭಗೊಂಡಿರುವ ಶ್ರೀ ಮಧ್ವವಾದಿರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರೊಫೆಸರ್ ಆಗಿ ಸೇರಿದ್ದಾರೆ. ಈ ನಿಟ್ಟಿನಲ್ಲಿ ಇವರಿಗೆ 30 ವರ್ಷಗಳ ಅನುಭವವಿದ್ದು ಇವರು Chartered Institute of Builders (CIOB) U.K. ಯ ಸದಸ್ಯರಾಗಿ ರುತ್ತಾರೆ. ಇವರು ಸಾಂತೂರು ಕೃಷ್ಣ ರಾವ್ ಮತ್ತು ಶ್ರೀಮತಿ ಶಾರದಮ್ಮ ದಂಪತಿಗಳ ಪುತ್ರ. ಇವರ ಪತ್ನಿ ಶ್ರೀಮತಿ ವೇದವಲ್ಲಿ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ. ಪ್ರೊ| ಸಾಂತೂರು ಸುಬ್ರಹ್ಮಣ್ಯ ರಾವ್ ಇವರಿಗೆ ಶ್ರೀಶಾರದಾ ಅಭಿನಂದನೆಗಳು.

### ಡಾ| ಸುಪ್ರಿಯ ನಾಗರಾಜ್ ಅವರಿಗೆ U.S.Aಯ ಎಂ.ಡಿ.ಪದವಿ



ನಮ್ಮ ಸಮಾಜದ ವೈದ್ಯೆ ಡಾ| ಸುಪ್ರಿಯ ನಾಗರಾಜ್ ಅವರು Obstetric and Gynaecology (ಪ್ರಸೂತಿ ಮತ್ತು ಸ್ತ್ರೀ ರೋಗ) ವಿಷಯದಲ್ಲಿ USA (ಅಮೇರಿಕ)ದ M.D. ಸ್ನಾತಕೋತ್ತರ ಪದವಿಯನ್ನು ಪಡೆದಿ ರುತ್ತಾರೆ. ಅಲ್ಲದೆ Pelvic Surgeryಯಲ್ಲಿ ವಿಶೇಷ ಅಧ್ಯಯನಕ್ಕೆ ಮುಂದಿನ ಎರಡು ವರ್ಷಗಳಿಗೆ ಫೆಲ್ಲೋಶಿಪ್ ಗಳಿಸಿರುತ್ತಾರೆ. ಇವರು ಪಡುಬಿದ್ರಿ ಗಣಪತಿ ಹೈಸ್ಕೂಲಿನಿಂದ ಕನ್ನಡ ಮಾಧ್ಯಮದಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ, ಮುಲ್ಕಿ ವಿಜಯಾ ಕಾಲೇಜಿನಿಂದ ಪಿಯುಸಿಯನ್ನೂ, ಬೆಂಗಳೂರಿನ ಎಮ್.ಎಸ್. ರಾಮಯ್ಯ ಕಾಲೇಜಿನಿಂದ ಎಮ್.ಬಿ.ಬಿ.ಎಸ್. ಪದವಿಯನ್ನೂ ಪಡೆದವರು. ಇವರು ತಮ್ಮ ವಿದ್ಯಾಭ್ಯಾಸದ ಅವಧಿಯ ಉದ್ದಕ್ಕೂ ಪ್ರತಿಭಾಶಾಲಿ ವಿದ್ಯಾರ್ಥಿನಿಯಾಗಿದ್ದವರು. ನಮ್ಮ ಪತ್ರಿಕೆಯ ಲೇಖಕರಾದ ಶ್ರೀ ವೈ. ಶಂಕರ ನಾರಾಯಣರಾವ್ ಮತ್ತು ಪುಷ್ಪ ರಾವ್ ದಂಪತಿಗಳ ಪುತ್ರಿಯಾಗಿರುವ ಇವರು ರಟ್ಟಾಡಿಯ ಶ್ರೀ ವಾಸುದೇವ ಹೆಬ್ಬಾರ್ ಮತ್ತು ಜಯಲಕ್ಷ್ಮೀ ಇವರ ಸೊಸೆ. 31ರ ಹರೆಯ ದಲ್ಲಿರುವ ಇವರು ಸದ್ಯ ಯುಎಸ್‌ಎಯ ಅಟ್ಲಾಂಟದಲ್ಲಿ ತಮ್ಮ ಪತಿ ಶ್ರೀ ನಾಗರಾಜ ಹೆಬ್ಬಾರ್ (ಐ.ಟಿ. ಇಂಜಿನಿಯರ್) ಮತ್ತು ಪುತ್ರಿ ಶ್ರೇಯಾ ಹೆಬ್ಬಾರ್ ಜೊತೆ ವಾಸಿಸುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಇಷ್ಟು ಎತ್ತರದ ಸಾಧನೆಗೈದ ಅಪರೂಪದ ವೈದ್ಯೆಗೆ 'ಶ್ರೀಶಾರದಾ' ಅಭಿನಂದನೆಗಳು.

### ಕರಾಟೆ : ಸುಹಾಸ್‌ರಾವ್‌ರವರಿಗೆ ಪ್ರಶಸ್ತಿ



ತಾ.7-8-2010 ಮತ್ತು ತಾ.8-8-2010 ರಂದು ಬೆಂಗಳೂರಿನಲ್ಲಿ ಸೆನ್ಸಾಯಿ ಎನ್. ರಾಜು ರವರು ಪ್ರಾಯೋಜಿಸಿದ ಫಸ್ಟ್ ಇಂಟರ್‌ಸ್ಟೇಟ್ ಇನ್ವಿಟೇಶನ್ ಕರಾಟೆ ಚಾಂಪಿಯನ್‌ಶಿಪ್‌ನ ಕಟ ವಿಭಾಗದಲ್ಲಿ 15 ವರ್ಷ ಮೇಲ್ಪಟ್ಟವರ ವಯೋಮಿತಿಯಲ್ಲಿ ಸುಹಾಸ್‌ರಾವ್ ರವರು ಎಲ್ಲೋ ಬೆಲ್ಟ್(ತೃತೀಯ ಸ್ಥಾನ)ನ್ನು ಪಡೆದಿರುತ್ತಾರೆ. ಇವರು ಈ ಮೊದಲು ಇದೇ ವಿಭಾಗದಲ್ಲಿ ತಾ.09-01-2010 ಮತ್ತು ತಾ.10-01-2010 ರಂದು ಜರಗಿದ ಕರಾಟೆ ಸ್ಪರ್ಧೆಯಲ್ಲಿ ಆರೆಂಜ್ ಬೆಲ್ಟ್ (ದ್ವಿತೀಯ ಸ್ಥಾನ)ನ್ನು ಪಡೆದಿರುತ್ತಾರೆ. ಇವರು ಚಿಟ್ಪಾಡಿಯ ಶ್ರೀಮತಿ ಇಂದಿರಾ ಮತ್ತು ಶ್ರೀ ದಿವಾಕರ ರಾವ್ ಚಿಟ್ಪಾಡಿ ಇವರ ಪುತ್ರ ಹಾಗೂ ಅಂಬಲಪಾಡಿ ಶ್ರೀಮತಿ ಇಂದಿರಾ ಮತ್ತು ಕೃಷ್ಣಮೂರ್ತಿರಾಯರ ಅಳಿಯ. ಇವರ ಈ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ವಿಳಾಸ ಬದಲಾವಣೆ

**C. MOHAN RAO**
Sharada Dhama, Vedavijnana Gurukulam
Janaseva Trust, Magadi Road,
Post Kodabogere,
Bangalore - 562 130.

**SRI M. R. VASUDEVA**
Airport Director
Mangalore Airport,
Mangalore - 570 006

**Y. V. JAYARAMA**
D3/62, ONGC Colony 'D' Type
Bandra Reclamation
Bandra (West)
Mumbai - 400050.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ| ವೈ. ಸುದರ್ಶನ ರಾವ್

**ಪ್ರಶ್ನೆ: ಹಂದಿ ಜ್ವರದ ಕೇಸುಗಳು ಪುನಃ ವರದಿಯಾಗುತ್ತಾ ಇವೆಯಲ್ಲವೇ? ಈ ಜ್ವರಕ್ಕೆ ರೋಗನಿರೋಧಕ ಲಸಿಕೆ ಇದೆಯೇ?**

**ಉತ್ತರ:** ಹಂದಿಜ್ವರ ಅಥವಾ H1N1 ಎಂದು ಕರೆಯಲಾಗುತ್ತಿರುವ ಖಾಯಿಲೆಯು ಒಂದು ವೈರಸ್ ಜನ್ಯ ಜ್ವರ. ಕಳೆದ ವರ್ಷ ಇದು ಪ್ರಪಂಚದಾದ್ಯಂತ ಹಬ್ಬಿ ಸುಮಾರು ಪ್ರಾಣ ಹಾನಿ ಉಂಟುಮಾಡಿ ಭೀತಿಯ ವಾತಾವರಣ ಸೃಷ್ಟಿಸಿತ್ತು. ಈ ವರುಷವೂ ಈ ಜ್ವರದ ಕೇಸುಗಳು ವರದಿಯಾಗುತ್ತಾ ಇರುವುದು ನಿಜ. ವಿಷಯ ಹಳತಾದಂತೆ ಪ್ರಾಮುಖ್ಯತೆ ಕಳೆದುಕೊಂಡರೂ ಈ ರೋಗವು ಇನ್ನೂ ಅದರ ಮೊನಚು ಕಳೆದುಕೊಂಡಿಲ್ಲವೆಂಬುದೂ ನಿಜ. ಇಂತಹಾ ಪರಿಸ್ಥಿತಿಯಲ್ಲಿ ವಿಜ್ಞಾನಿಗಳು ಈ H1N1 ಜ್ವರ ಬಾರದಂತೆ ಲಸಿಕೆಯನ್ನು ಕಂಡುಹಿಡಿದಿರುವುದು ನಿಟ್ಟುಸಿರು ಬಿಡುವ ಸಂಗತಿಯಾಗಿದೆ.

ನಿಷ್ಕ್ರಿಯಗೊಂಡಿರುವ ಅಥವಾ ಸತ್ತಿರುವ ವೈರಸನ್ನು ಸೂಕ್ತ ಪ್ರಮಾಣದಲ್ಲಿ ಆರೋಗ್ಯವಂತ ಮನುಷ್ಯನ ದೇಹಕ್ಕೆ ಸೇರಿಸಿದಾಗ ಆ ವ್ಯಕ್ತಿಯಲ್ಲಿ ಆ ವೈರಾಣುವಿನ ವಿರುದ್ಧ ಪ್ರತಿರೋಧ ಶಕ್ತಿಯು ಬೆಳೆಯುತ್ತದೆ. ಇಂತಹಾ ಪ್ರತಿರೋಧ ಶಕ್ತಿಯನ್ನು ಮುಂಚಿತವಾಗಿ ಹೊಂದಿರುವ ವ್ಯಕ್ತಿಯು ಒಂದು ವೇಳೆ ನಿಜವಾದ ವೈರಸ್‌ನ ಸಂಪರ್ಕಕ್ಕೆ ಬಂದಾಗ ಅವನು ಆ ವೈರಸ್ ತನ್ನ ದೇಹವನ್ನು ಪ್ರವೇಶಿಸಿ ರೋಗವನ್ನುಂಟು ಮಾಡದಂತೆ ತಡೆಯಲು ಶಕ್ತನಾಗುತ್ತಾನೆ. ಒಂದು ವೇಳೆ ರೋಗಕ್ಕೆ ಗುರಿಯಾದರೂ ಶೀಘ್ರ ಗುಣಮುಖನಾಗಲು ಶಕ್ತನಾಗಿರುತ್ತಾನೆ. ಇದು ರೋಗನಿರೋಧಕ ಲಸಿಕೆಯ ಮಹತ್ವ.

ಹಂದಿಜ್ವರಕ್ಕೆ ಎರಡು ರೀತಿಯ ಲಸಿಕೆಗಳು ಈಗ ಲಭ್ಯವಿವೆ:

1) ಮೂಗಿಗೆ ಹಾಕುವ ಹನಿ (drops) ರೂಪದ ಲಸಿಕೆ 2) ಚುಚ್ಚುಮದ್ದಿನ ರೂಪದ ಲಸಿಕೆ.

ಈ ಎರಡೂ ಲಸಿಕೆಗಳು ಸತ್ತಿರುವ ವೈರಸನ್ನು ಹೊಂದಿರುವ ಲಸಿಕೆಗಳು. ಈ ಲಸಿಕೆಗಳನ್ನು ಹಾಕಿಸಿಕೊಂಡರೆ ಆ ವ್ಯಕ್ತಿಯಲ್ಲಿ ಸುಮಾರು ಒಂದು ವರ್ಷದ ಕಾಲ ರೋಗನಿರೋಧಕ ಶಕ್ತಿಯಿರುತ್ತದೆ. ಆದರೆ ನೂರು ಜನರಿಗೆ ಈ ಲಸಿಕೆಗಳನ್ನು ಉಪಯೋಗಿಸಿದಾಗ ಐವತ್ತು ಜನರಲ್ಲಿ ಮಾತ್ರ ಇದು ಉತ್ತಮ ಪರಿಣಾಮ ಬೀರುತ್ತದೆ. (50% efficacy). ಮೂಗಿಗೆ ಹಾಕುವ ಹನಿ ರೂಪದ ಲಸಿಕೆಯು ಚುಚ್ಚುಮದ್ದಿನ ರೂಪದ ಲಸಿಕೆಗಿಂತ ಉತ್ತಮ ಪರಿಣಾಮ ಬೀರುತ್ತದೆ.

ಆರು ತಿಂಗಳು ವಯಸ್ಸು ದಾಟಿದ ಯಾರೂ ಈ ಲಸಿಕೆಗಳನ್ನು ಹಾಕಿಸಿಕೊಳ್ಳಬಹುದು. ಆದರೂ ಗರ್ಭಿಣಿಯರಿಗೆ, ವೃದ್ಧಾಪ್ಯದಿಂದ ನರಳುತ್ತಿರುವವರಿಗೆ, ತೀವ್ರ ತರದ ಇತರ ಖಾಯಿಲೆಯಿಂದ ಬಳಲುತ್ತಿರುವವರಿಗೆ ಈ ಲಸಿಕೆಯನ್ನು ಈಗ ಹಾಕುತ್ತಿಲ್ಲ. ಸದ್ಯದ ಮಟ್ಟಿಗೆ ಹಂದಿಜ್ವರದ ಚಿಕಿತ್ಸೆ ನಡೆಸುತ್ತಿರುವ ವೈದ್ಯಕೀಯ ಸಿಬಂದಿಗಳಿಗೆ ಮತ್ತು ಈ ರೋಗದ ಸಂಪರ್ಕಕ್ಕೆ ಬಂದಿರುವ ವ್ಯಕ್ತಿಗಳಿಗೆ ಮಾತ್ರ ಸರಕಾರದಿಂದ ಉಚಿತವಾಗಿ ಈ ಲಸಿಕೆ ಲಭ್ಯವಿದೆ. ಉಳಿದವರು ಈ ಜ್ವರದ ರೋಗನಿರೋಧಕ ಲಸಿಕೆ ಹಾಕಿಕೊಳ್ಳುವ ಇಚ್ಛೆಯಿದ್ದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಸುಮಾರು ರೂ.500/- ವೆಚ್ಚದೊಳಗೆ ಈ ಲಸಿಕೆಯನ್ನು ಹಾಕಿಸಿಕೊಳ್ಳಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ.: 98451 36322**

## ಮೀಸಲಾತಿ

ನಮ್ಮ ಸರಕಾರ ಕೊಟ್ಟು
ಮಹಿಳೆಯರಿಗೆ
ಮೀಸಲಾತಿ....
ಕೇಳುತ್ತಿದೆ.
ಓ ಗಂಡಸರೇ
ನಿಮಗೆ
ಮೀಸೆ ಎಲ್ಲೈತೀ?

– ಎಂ. ಗಣೇಶರಾವ್, ಬಾರಕೂರು

**PRAMOD**
AUTOMOBILES
KARANGALPADY, MANGALORE -575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2010-2011ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.15-09-2010ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.60,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.20-9-2010ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊಬಲಗನ್ನು ಹಿಂದಿನ ವರ್ಷದಂತೆಯೇ ಎಂ.ಓ. ಮೂಲಕ ಕಳುಹಿಸಲಾಗುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 101.**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನ

ಪ್ರತಿ ವರ್ಷ ನಮ್ಮ ಸಮಾಜದ ಉನ್ನತ ವ್ಯಾಸಂಗಕ್ಕೆ ವಿದ್ಯಾರ್ಥಿಗಳಿಗೆ ಸಾಲ ವಿದ್ಯಾರ್ಥಿ ವೇತನ ನೀಡಲು ಸಹಕರಿಸುತ್ತಿರುವ ಸನ್ಮಾನ್ಯ ಡಾ| ದಯಾನಂದ ಎಸ್. ರಾವ್‌ರವರು 2010-11ನೇ ಸಾಲಿಗೆ ಸಾಲ ವಿದ್ಯಾರ್ಥಿ ವೇತನ ನೀಡುವುದಕ್ಕಾಗಿ ನಮ್ಮ ಸಂಘಕ್ಕೆ ರೂ.3,00,001/- ದೇಣಿಗೆಯನ್ನು ನೀಡಿದ್ದಾರೆ. ಅವರ ಈ ಕೊಡುಗೆಯನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ, ಅವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ ಹಾಗೂ ಅವರ ಕುಟುಂಬದವರೆಲ್ಲರಿಗೆ ಶ್ರೀಶಾರದೆಯು ಸನ್ಮಂಗಲವನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು ಮತ್ತು ಆಡಳಿತ ಮಂಡಳಿ,** ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ

## ಉದಯಚಂದ್ರ ಪ್ರತಿಭಾ ಪುರಸ್ಕಾರ 2009-10

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2009-10ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 25-09-2010ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%★ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು "ಸಂಚಾಲಕರು, ಯುವವೇದಿಕೆ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ - 576 102" ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

★(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ

ಪ್ರತಿ ಬುಧವಾರ : **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.26-09-2010) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.09-10-2010 "ಗಮಕವಾಚನ" ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ಶುದ್ಧ ಪಂಚಮಿಯಂದು (ತಾ.28-09-2010) "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**



**ಕು| ಪ್ರೀತಿಕಾ ಪಿಲಿಂಜ**
ಎಲ್.ಎಲ್.ಬಿ. 5ನೇ ವರ್ಷ
ಎಸ್.ಡಿ.ಎಮ್. ಲಾ ಕಾಲೇಜು ಮಂಗಳೂರು
D/O ಶ್ರೀಮತಿ ಮತ್ತು ಶ್ರೀ
ತುಲಸೀದಾಸ ಪಿಲಿಂಜ ಪುತ್ತೂರು

### ಅಭಿನಂದನೆಗಳು

ಮಂಗಳೂರು ವಿಶ್ವವಿದ್ಯಾಲಯವು 2009ರಲ್ಲಿ ನಡೆಸಿದ B.A.(Law) ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ಹಾಗೂ ಮಂಗಳೂರಿನ ಪ್ರತಿಷ್ಠಿತ ಎಸ್.ಡಿ.ಎಮ್. ಲಾ ಕಾಲೇಜಿನ 2010-2011ನೇ ಸಾಲಿನ ವಿದ್ಯಾರ್ಥಿ ಸಂಘದ ಅಧ್ಯಕ್ಷಳಾಗಿ ಆಯ್ಕೆಯಾದ ನಮ್ಮ ಕುಟುಂಬದ ಹೆಮ್ಮೆಯ ಪುತ್ರಿ ಪ್ರೀತಿಕಾಳಿಗೆ ನಮ್ಮೆಲ್ಲರ ಹೃತ್ಪೂರ್ವಕ ಅಭಿನಂದನೆಗಳು

**- ಶ್ರೀಮತಿ ಲಕ್ಷ್ಮೀ ಪಿಲಿಂಜ ಮತ್ತು ಮಕ್ಕಳು**

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.**

### 2009-10ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

**ಮಾನ್ಯ ಸದಸ್ಯರೇ,**

**ನಮ್ಮ ಸೊಸೈಟಿಯ 2009-10ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.26-09-2010ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.**

**ಆಡಳಿತ ಮಂಡಳಿಯ ನಿರ್ಣಯದಂತೆ**

**ಪಟ್ಟಾಭಿರಾಮ ಎನ್.ಎಸ್.**
ಕಾರ್ಯದರ್ಶಿ

**ಎಂ. ಸದಾನಂದ ರಾವ್**
ಅಧ್ಯಕ್ಷರು

### ವಿಷಯ ಸೂಚಿ

1. **ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು**
2. **ತಾ.20-09-2009ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ**
3. **2009-2010ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.**
4. **2009-2010ನೇ ವರ್ಷದ ಅಪರಿಶೋಧಿತ ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ-ಜವಾಬ್ದಾರಿಗಳ ತಃಖ್ತೆಯ ಪರಿಶೀಲನೆ ಮತ್ತು ಅಂಗೀಕಾರ.**
5. **2009-2010ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.**
6. **2010-2011ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ**
7. **ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು. ಚರ್ಚೆಯ ವಿಷಯಗಳಿದ್ದರೆ ಸದಸ್ಯರು ಮಹಾಸಭೆಯ ದಿನಾಂಕದ ಐದು ದಿನಗಳ ಮೊದಲು ತಲುಪುವಂತೆ ಬರಹ ಮೂಲಕ ಸೊಸೈಟಿಯ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಸೊಸೈಟಿಯ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.**

ಉಡುಪಿ
20-7-2010

ಸಹಿ/-
**ಕಾರ್ಯದರ್ಶಿ**

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org